CC-O. In Public Domain. Digitized by eGangotri

ಸಸ್ವರ

ಮಂತ್ರಪುಷ್ಪಮ್

ಸಂಗ್ರಹ – ಅರ್ಥ – ವಿವರಣೆ
ಶ್ರೀ ಸಿ. ಲಕ್ಷ್ಮೀನಾರಾಯಣನ್

ಅಧಿಕೃತ ಮಾರಾಟಗಾರರು:
ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್
234, ಚಿಕ್ಕಪೇಟೆ, ಬೆಂಗಳೂರು–560 053.

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗಣಪತಿ ಶಾರದಾ ಗುರುಭ್ಯೋ ನಮಃ

ಸಸ್ವರ

ಮಂತ್ರಪುಷ್ಪಮ್

ಅರ್ಥ–ವಿವರಣೆಯೊಂದಿಗೆ

ಸಂಗ್ರಹ – ಅರ್ಥ–ವಿವರಣೆ

ಶ್ರೀ ಸಿ. ಲಕ್ಷ್ಮೀನಾರಾಯಣನ್

ಶ್ರೀ ವಿದ್ಯಾ ಭಾರತೀ
ಪುಸ್ತಕ ಕೇಂದ್ರ
ಭಾರತೀ ಬೀದಿ, ಶೃಂಗೇರಿ - 577 139

ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ಚಿಕ್ಕಪೇಟೆ, ಬೆಂಗಳೂರು–560 053. ದೂರವಾಣಿ : 22258217

Sri Vidyabharathi Book Centre, Sringeri

CC-0. In Public Domain. Digitized by eGangotri

MANTRAPUSHPAM with explanation in Kannada - compiled & Edited by Sri C. Lakshminarayanan and Published by Sri L.N. Prasad, Krishnamurthypuram, Mysore-4.

.....

ಸಂಗಹಗ : ಸಿ. ಲಕ್ಷ್ಮೀನಾರಾಯಣನ್

ಪ್ರಕಾಶನದ ನಿರ್ವಹಣೆ : ಟಿ.ಎಸ್. ಸುರೇಶ್, ಬಿ.ಎಸ್ಸಿ., (ಆನರ್ಸ್)
ಬನಶಂಕರಿ, ಬೆಂಗಳೂರು : 560 070
ದೂ : 2225 8217

ಪರಿಷ್ಕೃತ ಮುದ್ರಣ : 2019

ಹಕ್ಕುಗಳು : ಹಕ್ಕುಗಳು ಕಾದಿರಿಸಲಾಗಿದೆ

ಡಿ.ಟಿ.ಪಿ. : ಸಹನಾ ಗ್ರಾಫಿಕ್ಸ್
ಬೆಂಗಳೂರು : 560 078

ಮುದ್ರಣ : ಶ್ರೀ ವೆಂಕಟೇಶ್ವರ ಪಿಂಟಿಂಗ್ ಪ್ರೆಸ್
ಜೆ.ಪಿ. ನಗರ 1ನೇ ಹಂತ
ಬೆಂಗಳೂರು : 78, ದೂ : 2244 4763

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮಾತು

'ಮಂತ್ರಪುಷ್ಪ'ವೆಂದರೆ ದೇವರಿಗೆ ಪುಷ್ಪಗಳನ್ನು (ಹೂವುಗಳನ್ನು) ಮಂತ್ರಪೂರ್ವಕವಾಗಿ ಸಮರ್ಪಿಸುವುದು. ತೈತ್ತಿರೀಯಾರಣ್ಯಕದ ಅರುಣದಲ್ಲಿನ ಪ್ರಥಮ ಪ್ರಶ್ನವೇ ಮಂತ್ರಪುಷ್ಪ. ಇದನ್ನು ಸೂರ್ಯೋಪಾಸನೆಗೂ, ಸೂರ್ಯನಮಸ್ಕಾರದಲ್ಲಿಯೂ, ದೇವರ ಪೂಜಾ ಸಮಾಪ್ತಿಕಾಲದಲ್ಲಿ ಪುಷ್ಪಾಂಜಲಿ ಕೊಡುವಾಗಲೂ ಹೇಳುತ್ತಾರೆ. ಹೀಗೆ ಅನೇಕ ಸಂದರ್ಭಗಳಲ್ಲಿ ಮಂತ್ರಪುಷ್ಪದ ಅಗತ್ಯವಿದೆ.

ಮಂತ್ರಪುಷ್ಪದ ರೀತಿಯಲ್ಲಿಯೇ ನಾರಾಯಣಸೂಕ್ತ ಪಠನೆಯೂ ಕಂಡು ಬರುತ್ತದೆ. ಈ ಸೂಕ್ತವು ತೈತ್ತಿರೀಯಾರಣ್ಯಕದ ಹತ್ತನೆಯ ಪ್ರಪಾಟಕದಲಿ ಮಹಾನಾರಾಯಣೋಪನಿಷತ್ತಿನ ಹದಿಮೂರನೆ ಅನುವಾಕದಲ್ಲಿ ಪ್ರಸಿದ್ಧವಾಗಿರುವ 'ಅಂಭಸಿ' ಎಂಬ ಪ್ರಶ್ನದಲ್ಲಿ ಬರುತ್ತದೆ. ಈ ಎರಡು ಮಂತ್ರಗಳನ್ನೂ ಸ್ವರಸಹಿತ ಹೇಳಲು ಅನುಕೂಲವಾಗುವಂತೆ ಸ್ವರಸಹಿತ ಬರೆಯಲಾಗಿದೆ. ಅರ್ಥ ತಿಳಿದು ಆಚರಿಸುವ ವೇದೋಕ್ತ ಕರ್ಮಗಳು ಹೆಚ್ಚು ಫಲಪ್ರದವಾಗುತ್ತವೆ. ಆದ್ದರಿಂದ ಪ್ರತಿಯೊಂದು ಮಂತ್ರದ ತಾತ್ಪರ್ಯವನ್ನೂ ಕೊಡಲಾಗಿದೆ.

ಮಾನ್ಯ ಮಹನೀಯರು ಇದರ ಸದುಪಯೋಗವನ್ನು ಪಡೆದುಕೊಳ್ಳುವರೆಂದು ನಂಬಿದ್ದೇನೆ.

ಸಿ. ಲಕ್ಷ್ಮೀನಾರಾಯಣನ್
ಸಂಗ್ರಾಹಕ

CC-O. In Public Domain. Digitized by eGangotri

ವಿ|ಷ|ಯಾ|ನು|ಕ್ರ|ಮ|ಣಿ|ಕೆ

೧. ಸಾಮಾನ್ಯ ವಿವರಣೆ 5

೨. ಸಸ್ವರ ಮಂತ್ರಪುಷ್ಪಮ್ 12

೩. ಮಂತ್ರಪುಷ್ಪಮ್ - ತಾತ್ಪರ್ಯಸಹಿತ 21

೪. ಶ್ರೀ ನಾರಾಯಣಸೂಕ್ತಮ್ - ತಾತ್ಪರ್ಯ ಸಹಿತ..... 25

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಓಂ ॥

ಶ್ರೀ ಗಣಪತಿ ಶಾರದಾ ಗುರುಭ್ಯೋ ನಮಃ

ಮಂತ್ರಪುಷ್ಪಮ್

ಸಾಮಾನ್ಯ ವಿವರಣೆ :- 'ಮಂತ್ರಪುಷ್ಪ'ವೆಂದರೆ ಮಂತ್ರ ಪೂರಿತವಾದ ಹೂವು – ಎಂದರ್ಥ. ಈ ಮಂತ್ರದಲ್ಲಿ ನೈಸರ್ಗಿಕವಾದ ಹೂವನ್ನು ಕುರಿತು ಪ್ರಸ್ತಾಪವಿಲ್ಲ. 'ಪುಷ್ಪ'ವೆಂಬ ಪದವನ್ನು ನಿಜವಾದ ಹೂವೆಂದು ಇಲ್ಲಿ ಉಪಯೋಗಿಸಿಲ್ಲ. ಹೂವಿನ ವಾಸನೆ, ಅದರ ಧಾತುಗಳಿಂದ ಕೂಡಿರದೆ ನೋಟಕ್ಕೆ ಹೂವಿನಂತೆ ತೋರುವುದಾಗಿ ವರ್ಣಿಸಲಾಗಿದೆ. ಈ ಮಂತ್ರದಲ್ಲಿರುವುದು ನೀರಿನ ಮತ್ತು ಆ ದೇವತೆಗೆ ಸಂಬಂಧಪಟ್ಟ ಬೇರೆ ಬೇರೆ ಆಶ್ರಯ ಸ್ಥಾನಗಳು. ಅವೆಂದರೆ – (1) ಬೆಂಕಿ (ಅಗ್ನಿ) (2) ಗಾಳಿ (ವಾಯು) (3) ಸೂರ್ಯ, (4) ಚಂದ್ರ (5) ನಕ್ಷತ್ರಗಳು (6) ಮೋಡಗಳು (ಪರ್ಜನ್ಯ) ಮತ್ತು ಸಂವತ್ಸರ.

ವೈದಿಕ ಕರ್ಮಗಳಲ್ಲಿ ಬಳಸುವ ಹಲವು ವೇದ ಮಂತ್ರಗಳಲ್ಲಿ ಸಾಮಾನ್ಯವಾಗಿ ಆಯಾ ಮಂತ್ರಕ್ಕೂ, ಆಯಾ ಕಾರ್ಯಕ್ಕೂ ಸಂಬಂಧವಿರುವುದಿಲ್ಲ. ಉದಾ : (1) **'ಮಧುವಾತಾ ಋತಾಯತೇ'** ಎಂಬ ಸತ್ಕರ್ಮನಿರತನಿಗೆ ಹಿತವನ್ನು ಕೋರುವ ಮಂತ್ರಕ್ಕೂ, ದೇವರ ಅಭಿಷೇಕಕ್ಕೂ ಹೊಂದಿಕೆಯಿರುವುದಿಲ್ಲ. (2) **'ಗಂಧದ್ವಾರಾಂ'** ಎಂಬುದು ಲಕ್ಷ್ಮಿಯನ್ನು ಆಹ್ವಾನಿಸುವ ಮಂತ್ರ. ಇದನ್ನು ದೇವತೆಗೆ ಗಂಧವನ್ನು ಹಚ್ಚುವಾಗ ಹೇಳುತ್ತಾರೆ. (3) **'ಸಾಂಗ್ರಹಣ್ಯೇಷ್ಟ್ಯಾ ಯಜತೇ'** ಎಂಬ ಇಷ್ಟಿಯನ್ನು ಮಾಡುವವನು ಜನರ ಗುಂಪನ್ನು ಕೂಡಿಸುತ್ತಾನೆ ಎಂಬುದಕ್ಕೂ, ದೇವರಿಗೆ ಕರ್ಪೂರಾರತಿಯನ್ನು ಬೆಳಗುವುದಕ್ಕೂ ಹೋಲಿಕೆ ಇರುವುದಿಲ್ಲ. ಇಂಥಹ ಮಂತ್ರಗಳಲ್ಲಿ 'ಶಬ್ದ ಸಾಮ್ಯ'ವಾಗಲೀ ಅಥವಾ 'ಅಕ್ಷರ ಸಾಮ್ಯ'ವಾಗಲೀ ಇರುವುದರಿಂದ ಅವುಗಳನ್ನು ಅಂಥಹ

CC-O. In Public Domain. Digitized by eGangotri

ಸಂದರ್ಭಗಳಲ್ಲಿ ಹೇಳುತ್ತಾರೆ. ಇದರಂತೆಯೇ 'ಯೋಽಪಾಂ' ಎಂಬ ಮಂತ್ರಕ್ಕೂ, ದೇವತೆಗೆ ಪುಷ್ಪಾಕ್ಷತೆಗಳನ್ನು ಸಮರ್ಪಿಸುವುದಕ್ಕೂ ಸಂಬಂಧವಿಲ್ಲ. ಇದರಲ್ಲಿ 'ಪುಷ್ಪ' ಎಂಬ ಶಬ್ದವು ಪದೇ ಪದೇ ಬರುವುದರಿಂದ ಇದು ದೇವರನ್ನು ಪುಷ್ಪಗಳಿಂದ ಅಲಂಕರಿಸುವಾಗಲೂ, ಮಂಗಳಾರತಿಯ ನಂತರ ದೇವರನ್ನು ಸ್ತುತಿಸಿ ಪುಷ್ಪಾಕ್ಷತೆಗಳನ್ನು ಸಮರ್ಪಿಸುವಾಗಲೂ ಉಪಯೋಗಿಸುತ್ತಾರೆ. 'ಯೋಽಪಾಂ' ಎಂಬ ಈ ಅನುವಾಕವು ಜಲದೇವತೆಯ ಮಹಿಮೆಯನ್ನು ತಿಳಿಸಿ ಆ ದೇವತೆಯ ಉಪಾಸನೆಯಿಂದ ಜೀವನದಲ್ಲಿ ಆಶ್ರಯವನ್ನು ಪಡೆದು ಪುತ್ರ, ಪಶು, ಸಂತಾನಾದಿ ಐಹಿಕ ಭೋಗ ಸಮೃದ್ಧವಾಗಿ ಅಭ್ಯುದಯವನ್ನು ಹೊಂದುವನೆಂಬುದು ಈ ಮಂತ್ರದ ವಿಷಯ. ಇಲ್ಲಿ ಜಲವನ್ನು ಹೆಚ್ಚಾಗಿ ಹೊಗಳಿದೆ. ನೀರು ಎಲ್ಲಾ ಕರ್ಮಗಳಿಗೂ ಅತ್ಯಗತ್ಯ.

'ಆಪಂ ಪುಷ್ಪಂ' ಎಂಬ ಪದಕ್ಕೆ 'ಜಲಪುಷ್ಪಗಳು' (ನೀರಿನ ಹೂವುಗಳು) ಎಂಬುದು ಅರ್ಥ. ಆದರೆ 'ಪುಷ್ಪ' ಎಂಬ ಪದವನ್ನು ಜಲದ ಮೂಲವನ್ನು ತಿಳಿಯುವ ಸಾಧ್ಯತೆಗಾಗಿ ಉಪಯೋಗಿಸಲಾಗಿದೆ. ಸೃಷ್ಟಿಯ ಮೂಲ ತತ್ತ್ವವನ್ನು ಹಿನ್ನೆಲೆಯಾಗಿಟ್ಟುಕೊಂಡು 'ಅಪ್' (ಜಲ–ನೀರು) ತತ್ತ್ವದ ಮಹಿಮೆಯನ್ನು ವಿಶೇಷವಾಗಿ ಪ್ರಶಂಸಿಸಲಾಗಿದೆ. ಇದು ಜಲ ಮೂಲದ ವ್ಯಾಪ್ತಿ ಹಾಗೂ ಪವಿತ್ರತೆಯನ್ನು ವಿಮರ್ಶಿಸುತ್ತದೆ.

ಬ್ರಹ್ಮ ಸೃಷ್ಟಿಯಲ್ಲಿ ಮೊದಲು ಸೃಷ್ಟವಾದುದು ಜಲ (ಅಪ್–ನೀರು). ಚಂದ್ರನು ಈ ನೀರಿನ ಪುಷ್ಪವೆಂದು ವರ್ಣಿಸಲಾಗಿದೆ. ಈ ಜಲತ್ಕಾರಣ ತತ್ತ್ವವನ್ನು ಯಾರು ಅರಿತು ಕೊಳ್ಳುತ್ತಾರೋ ಅವರು ಪುತ್ರ ಪೌತ್ರಾದಿ ಗಳಿಂದಲೂ, ಪಶು ಸಮೂಹಾದಿಗಳಿಂದಲೂ ಕೂಡಿ ಲೋಕದಲ್ಲಿ ಸುಖ ಪಡುತ್ತಾರೆಂದು ವರ್ಣಿಸಲಾಗಿದೆ.

ಮಂತ್ರಪುಷ್ಪದ ವಿವರವನ್ನು ವಿಂಗಡಿಸಿ ಅರ್ಥಮಾಡಿಕೊಳ್ಳುವುದಕ್ಕೆ ಮೊದಲು ದೇವತಾರ್ಚನೆಯಲ್ಲಿ ಪುಷ್ಪಗಳ ಮಹತ್ತ್ವ ಮತ್ತು ಪಾತ್ರವನ್ನು ತಿಳಿದುಕೊಳ್ಳುವುದು ಉತ್ತಮ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಷ್ಪಗಳು ಸೃಷ್ಟಿಯ ಬಹು ಬೆಲೆಯುಳ್ಳ ಖಜಾನೆ. ವಿಷ್ಣುವನ್ನು ಹೊಗಳುವಾಗ 'ಪುಷ್ಪಾಸ' (ಹೂವಿನಂತೆ ನಸುನಗುವವನು), ಕಮಲನಯನ, ಪದ್ಮನಾಭ 'ಎಂದೂ, ಲಕ್ಷ್ಮೀದೇವಿಯ ಗುಣಗಾನ ಮಾಡುವಾಗ' 'ಪದ್ಮಪ್ರಿಯಾ, ಪದ್ಮೋದ್ಭವ, ಪದ್ಮಮುಖೀ' ಎಂದೂ ಮುಂತಾಗಿ ಬಣ್ಣಿಸುತ್ತಾರೆ. ಇವು ಪರಮಾತ್ಮನಿಂದ ಮಾನವರ ಸುಖ, ವಿಕಾಸನ ಮತ್ತು ಸೌಂದರ್ಯವನ್ನು ಪ್ರಕಟಿಸುವುವೆಂದು ತಿಳಿಯಬಹುದು. ಹೂಗಳು ಲೌಕಿಕ ಪ್ರಪಂಚದ ಸೌಂದರ್ಯವನ್ನೂ, ಸ್ವರ್ಗೀಯ ವೈಭವವನ್ನೂ ಒಂದು ಗೂಡಿಸುತ್ತವೆ. ಆದ್ದರಿಂದಲೇ ನಾವು ದೇವತೆಗಳನ್ನು ಪುಷ್ಪ ಸಂಬಂಧ ರೂಪದಿಂದ ಹೊಗಳುವುದು ವಾಡಿಕೆ.

ಇನ್ನು ಈ ಮಂತ್ರದಲ್ಲಿ 'ಆಯತನವಾನ್ ಭವತಿ' ಎಂಬುದು ಪುನರುಕ್ತಿಯಾಗಿ ಸುಮಾರು ಮೂವತ್ತು ಬಾರಿಗೂ ಮೀರಿ ಬರುತ್ತದೆ. 'ಆಯತನ' ಎಂದರೆ–ಆಶ್ರಯ, ಮನೆ–ಎಂದರ್ಥ. ಪ್ರಪಂಚದಲ್ಲಿ ಯಾವನೂ ನಿರಾಶ್ರಯನಾಗಿ ಜೀವಿಸಲಾರನು. 'ಅನಾಥ'ನಿಗೂ ಭೂಮಿ, ಗಾಳಿ, ಬೆಳಕು, ನೀರು, ಆಕಾಶಾದಿಗಳ ಆಶ್ರಯಗಳಿದ್ದೇ ಇವೆ. ಜಲದೇವತೆಯ ಆಶ್ರಯ ಸ್ಥಾನವನ್ನು ಇಲ್ಲಿ ಸಂಕೀರ್ತನ ಮಾಡಿರುವಂತೆ ಚಿಂತಿಸುವ ಉಪಾಸಕನು ಶ್ರೇಷ್ಠವಾದ–ಉತ್ತಮವಾದ ಆಶ್ರಯ ಉಳ್ಳವನಾಗುವನು ಎಂಬುದು ಅಭಿಪ್ರಾಯ.

ತೈತ್ತಿರೀಯಾರಣ್ಯಕದ 'ಅರುಣ'ದಲ್ಲಿನ ಪ್ರಥಮ ಪ್ರಶ್ನವೇ 'ಮಂತ್ರ ಪುಷ್ಪ' ಇದನ್ನು ಸೂರ್ಯೋಪಾಸನೆಗೂ, ಸೂರ್ಯನಮಸ್ಕಾರದಲ್ಲಿಯೂ ಉಪಯೋಗಿಸುತ್ತಾರೆ. ದೇವರಪೂಜೆ ಸಮಾಪ್ತಿ ಕಾಲದಲ್ಲಿ ಪುಷ್ಪಾಂಜಲಿಯನ್ನು ಕೊಡುವಾಗ ಮುಖ್ಯವಾಗಿ ಈ ಮಂತ್ರವನ್ನು ಬಳಸುವರು.

ಸಮುದ್ರದ ನೀರಿನಿಂದ ಮೇಲಕ್ಕೆದ್ದು ಬರುವಂತೆ ಕಾಣುವುದರಿಂದ ಚಂದ್ರ, ಸೂರ್ಯ, ನಕ್ಷತ್ರಗಳನ್ನು ನೀರಿನ ಪುಷ್ಪಗಳೆಂದು ಈ ಮಂತ್ರದಲ್ಲಿ ಹೆಚ್ಚಾಗಿ ಹೊಗಳಿದೆ. ನೀರು ಎಲ್ಲಾ ಕರ್ಮಗಳಿಗೂ ಅತ್ಯಗತ್ಯ ಹಾಗೂ ಪಂಚಭೂತಗಳಲ್ಲಿ ಅತ್ಯಂತ ದೊಡ್ಡದು, ಸ್ವಯಂ ಪವಿತ್ರವಾದುದೂ ಆಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತುಮಾಂ' ಎಂಬುದು ಪ್ರಕೃತಿಯಲ್ಲಿನ ಜಲದ ಶುದ್ಧೀಕರಿಸುವ ಶಕ್ತಿಯನ್ನು ಸಮರ್ಥಿಸುತ್ತದೆ. ದೇವತೆಗಳಿಗೆ ನೀರು ಬಹಳ ಪವಿತ್ರವಾದ ವಾಸಸ್ಥಾನ (ಆಪೋ ವೈ ದೇವಾನಾಂ ಪ್ರಿಯಂ ಧಾಮ). ಲೋಕ ವ್ಯವಹಾರದಲ್ಲಿಯೂ ನೀರಿನ ಅವಶ್ಯಕತೆ ಬಹಳ ಹೆಚ್ಚಿನದು, ವೇದಗಳಲ್ಲಿ ನೀರು ಆನಂದವನ್ನು ಸೂಚಿಸುವ ಸಂಜ್ಞೆ ಅಥವಾ ಪ್ರತೀಕವೆಂಬ ಭಾವನೆಯನ್ನು ಕಾಣಬಹುದು. ಆನಂದಕ್ಕೆ ಅಧಿಷ್ಠಾನವಾದವನು ಪರಮಾತ್ಮನೇ. ಇವನನ್ನು ಅರಿತವನು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಆನಂದವನ್ನು ಪಡೆಯುವನು ಎಂಬುದು ಈ ಮಂತ್ರದ ತಾತ್ಪರ್ಯ.

ಈ ಮಂತ್ರದಲ್ಲಿ ಸೃಷ್ಟಿಯ ಮೂಲ ತತ್ತ್ವವನ್ನು ಹಿನ್ನೆಲೆಯಾಗಿಟ್ಟುಕೊಂಡು ಅಪ್ (ಜಲ–ನೀರು) ತತ್ತ್ವದ ಮಹಿಮೆಯನ್ನು ವಿಶೇಷವಾಗಿ ಪ್ರಶಂಸಿಸಲಾಗಿದೆ. ಬ್ರಹ್ಮ ಸೃಷ್ಟಿಯಲ್ಲಿ ಮೊದಲು ಸೃಷ್ಟವಾದುದು ನೀರು (ಜಲ). ಇದರಲ್ಲಿ ಮೊದಲು ಚಂದ್ರನನ್ನು ಅಪ್ಪಿನ (ನೀರಿನ) ಪುಷ್ಪವೆಂದು ಬಣ್ಣಿಸಲಾಗಿದೆ. ಅನಂತರ ಅಗ್ನಿ, ವಾಯು ಮೊದಲಾದ ಒಂದೊಂದೂ ಅಪ್ಪಿಗೆ (ನೀರಿಗೆ) ಆಯತನ (ಆಧಾರ–ಆಶ್ರಯ)ವಾಗಿವೆ ಎಂದು ವರ್ಣಿಸಲಾಗಿದೆ. ಹೀಗೆ ಇವುಗಳ ಆಶ್ರಯವನ್ನು ಅರಿತರೆ ಅವನಿಗೆ ವಿಶೇಷ ಫಲಗಳು ದೊರಕುವುವು ಎಂದು ಫಲಶ್ರುತಿಯನ್ನು ಹೇಳಿದೆ.

ಅಮೃತಮಯ ಸಮುದ್ರದ ಮಧ್ಯದಲ್ಲಿ ಶ್ರೀ ವಿಷ್ಣುವು ಮಹಾಲಕ್ಷ್ಮಿಯೊಡನೆ ಶೇಷಶಾಯಿಯಾಗಿ ಪವಡಿಸಿದ್ದಾನೆ. ಅವನ ನಾಭಿಕಮಲದಲ್ಲಿ ಬ್ರಹ್ಮನ ಉತ್ಪತ್ತಿಯಾಗುತ್ತದೆ. ಅವನಿಂದ ಜಗತ್ ಸೃಷ್ಟಿಯಾಗುತ್ತದೆ. ಜಲವು ಮುಂದಿನ ಎಲ್ಲಾ ಸೃಷ್ಟಿಗೂ ಆಧಾರವಾಗಿ ತನ್ನ ಗರ್ಭದಲ್ಲಿ ವಿಷ್ಣುವನ್ನು ಹೊತ್ತುಕೊಂಡಿದೆ. ಆ ಅಪ್ಪಿನ (ನೀರಿನ)ಲ್ಲಿರುವ ನಾವೆಯನ್ನು, ತಾರಕಶಕ್ತಿಯಾದ ನಾರಾಯಣನನ್ನು ಯಾರು ಸಾಕ್ಷಾತ್ಕರಿಸಿಕೊಳ್ಳುತ್ತಾರೋ ಅವರು ಸುಪ್ರತಿಷ್ಠಿತರಾಗುತ್ತಾರೆ. ಇದೇ ಈ ಮಂತ್ರದ ಗುರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ನಾರಾಯಣ ಸೂಕ್ತ

ಪುರಾತನ ಭಾರತೀಯ ಮಹರ್ಷಿಗಳಿಂದ ಹೇಳಲ್ಪಟ್ಟ ಸೂಕ್ತಗಳು, ಸೃಷ್ಟಿಯ ವಿಷಯದಲ್ಲಿ ಪ್ರಕಟಿಸಿರುವ ವಿಚಾರಗಳು ಮತ್ತು ದೃಷ್ಟಿಗಳು ಋಷಿಗಳಿಗೆ ಒಂದು ವಿಶೇಷವಾದ ಸಾಧನೆಯಿಂದ ತಿಳಿದು ಬಂದುವು ಗಳಾಗಿವೆ. ಅವರು ಅವುಗಳನ್ನು ತಮ್ಮ ಹೃದಯ ಕಮಲದಲ್ಲಿ ಹುಡುಕಿ ಕಂಡು ಕೊಂಡರು.

ಈ ನಾರಾಯಣ ಸೂಕ್ತವು ಭಾರತೀಯ ಮಹರ್ಷಿಗಳ ಮನಸ್ಸು ಹೋದ ದಾರಿ, ಅವರು ತಮ್ಮ ಒಳಗಣ್ಣಿನಿಂದ ನೋಡಿ ತಿಳಿದ ವಸ್ತುವಿನ ವೈಖರಿಯನ್ನು ಗುರುತಿಸುತ್ತದೆ. ವಿಶ್ವಮೂಲವಾದ ಸತ್ಯಪುರುಷನನ್ನು ತಿಳಿಯಬೇಕಾದರೆ ಹೃದಯದ ಕಡೆಗೆ ತಿರುಗಬೇಕು. ಇದು ಉಪನಿಷತ್ತುಗಳ ಸಿದ್ಧಾಂತ. ಈ ಸೂಕ್ತವು ಸತ್ಯಸ್ವರೂಪ ಪರಮಾತ್ಮನನ್ನು ನೋಡಿದ ನಾರಾಯಣನೆಂಬ ಋಷಿಯೊಬ್ಬನು ತನ್ನ ಅಂತರಂಗದಲ್ಲಿ ಮಾಡಿದ ದರ್ಶನವನ್ನು ಸುಂದರವಾಗಿ ವರ್ಣಿಸುತ್ತದೆ.

ಈ ಮಂತ್ರ ಭಾಗವು ಯಜುರ್ವೇದ ತೈತ್ತಿರೀಯಾರಣ್ಯಕದ ಹತ್ತನೆಯ ಪ್ರಪಾಠಕದಲ್ಲಿ ಮಹಾ ನಾರಾಯಣೋಪನಿಷತ್ತಿನ ಹದಿಮೂರನೆಯ ಅನುವಾಕದಲ್ಲಿ ಪ್ರಸಿದ್ಧವಾಗಿರುವ 'ಅಂಭಸಿ' ಎಂಬ ಪ್ರಶ್ನದಲ್ಲಿ ಬರುತ್ತದೆ. ಭಗವಂತನ ಗುಣ ವಿಶೇಷಗಳು ಈ ಅನುವಾಕದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಈ ಸೂಕ್ತವನ್ನು ಅಭಿಷೇಕ ಕಾಲದಲ್ಲಿಯೂ ಮತ್ತು ದೇವರಿಗೆ ಮಂಗಳಾರತಿಯಾದ ನಂತರ ಮಂತ್ರಪುಷ್ಪವೆಂಬ ಉಪಚಾರ ಕಾಲದಲ್ಲಿಯೂ (ಉಪಚಾರ–ವೆಂದರೆ ಪೂಜಿಸುವ ದೇವತೆಯ ಬಳಿಗೆ ಸುಲಭವಾಗಿ ಹೋಗಲು ಕೈಗೊಳ್ಳುವ ಒಂದು ಕಾರ್ಯಕ್ರಮ) ಹೇಳುತ್ತಾರೆ. ಪಾರಾಯಣಕ್ಕಾಗಿಯೂ ಹೇಳಬಹುದು. ಇದೊಂದು ವೇದಾಂತ ರಹಸ್ಯಗಳನ್ನೆಲ್ಲಾ ಒಳಗೊಂಡಿರುವ ರತ್ನಗನಿಯಾಗಿದೆ.

ಪುರುಷಸೂಕ್ತದಲ್ಲಿ ದಹರ ವಿದ್ಯೆಯಲ್ಲಿ ಧ್ಯಾನಿಸಲ್ಪಡುವ ದೇವತೆ ನಾರಾಯಣನೆಂದು ಹೇಳಲ್ಪಟ್ಟಿದೆ. ಈ ಅನುವಾಕದಲ್ಲಿ ಎಲ್ಲಾ ವಿದ್ಯೆಗಳಲ್ಲೂ

CC-O. In Public Domain. Digitized by eGangotri

ಬ್ರಹ್ಮ, ಶಿವ, ವಿಷ್ಣು, ಪರಬ್ರಹ್ಮ, ಪರಂಜ್ಯೋತಿ, ಪರತತ್ತ್ವ, ಪರಮಾತ್ಮ ಇಂದ್ರ, ಅಕ್ಷರ, ಅತ್ಯುತ್ತಮ ಮತ್ತು ಸ್ವತಂತ್ರ ಮೊದಲಾದ ಶಬ್ದಗಳಿಂದ ಧ್ಯಾನಿಸಲ್ಪಡುವ ದೇವತೆಯು ಹೇಳಲ್ಪಡುವುದರಿಂದ ಈ ಶಬ್ದಗಳಿಗೂ ನಾರಾಯಣನೇ ಶಬ್ದಾರ್ಥವೆಂದು ಹೇಳಲ್ಪಟ್ಟಿದೆ. ಉಪನಿಷತ್ತುಗಳಲ್ಲಿ 'ಮಹೇಶ್ವರ', 'ನಾರಾಯಣ' ಎಂದು ಹೆಸರಿಸಿರುವುದು ಒಂದೇ ವಸ್ತು. ಶ್ರುತಿ ಮಾತೆಯ ದೃಷ್ಟಿಯಿಂದ 'ನಾರಾಯಣ' ಮಹೇಶ್ವರ'ರು ಬೇರೆ ಬೇರೆಯಲ್ಲ. ನರರ ಸ್ವಾಮಿಯೇ ನಾರಾಯಣ. ನರರ ಹೃದಯವನ್ನು ಆಶ್ರಯಿಸಿರುವ ಅಂತರ್ಯಾಮಿಯೇ ನಾರಾಯಣ. ಸಕಲ ಬ್ರಹ್ಮಾಂಡವೂ ವಿರಾಡ್ರೂಪ. ಅದು ಪರಮೇಶ್ವರನ ಒಂದಂಶ. ಅಂದ ಮೇಲೆ ನಮ್ಮೆಲ್ಲರ ಶಿರಸ್ಸುಗಳೂ ಅವನವೇ. ಆದ್ದರಿಂದಲೇ ಅವನನ್ನು 'ಸಹಸ್ರಶೀರ್ಷಾ' ಎಂದು ಕರೆಯುವುದು. ಉಪಾಸಕನು ತನ್ನ ಹೃದಯ ಕಮಲದಲ್ಲಿ ಪರಮೇಶ್ವರನ ಸ್ವರೂಪವನ್ನು ಉಪಾಸಿಸಬೇಕೆಂದು ತಿಳಿಸುತ್ತಾ ಅವನ ಗುಣ ವಿಶೇಷಗಳನ್ನು ಅನುಸಂಧಾನ ಮಾಡಲು ವಿವರಿಸಲಾಗಿದೆ.

'ನಾರಾಯಣ' ಎಂಬ ಪದವು ಮಹರ್ಷಿಗಳು ತಮ್ಮ ಹೃದಯದಲ್ಲಿ ಕಂಡ ಪುರುಷನನ್ನು ಒಂದು ವಿಶೇಷವಾದ ದೃಷ್ಟಿಯಿಂದ ಹೇಳುವುದಾಗಿದೆ. 'ಅಯನ' ಅಂದರೆ ದಾರಿ ಅಥವಾ ಲಕ್ಷ್ಯ. ಹೃದಯದಲ್ಲಿರುವ ಜ್ಯೋತಿರ್ಮಯನಾದ ಪುರುಷನೇ ಮನುಷ್ಯರೆಲ್ಲರಿಗೂ ಏಕಮಾತ್ರಧಾರಿ. ಅವನೇ ಎಲ್ಲರಿಗೂ ಪರಮ ಲಕ್ಷ್ಯ ಎಂಬ ಅಭಿಪ್ರಾಯವನ್ನು ಇದು ಸೂಚಿಸುತ್ತದೆ. ಇದು ಕೇವಲ ನಾಮಪವಲ್ಲ, ಅನ್ವರ್ಥವಾದ ಪದ.

ಈ ಸೂಕ್ತದ ಮೊದಲರ್ಧ ಭಾಗವು ಪರಮೇಶ್ವರನ ವಿಷಯದಲ್ಲಿ ಇತರ ಸೂಕ್ತಗಳು ಹೇಳುವುದನ್ನೇ ಪುನರುಕ್ತಿಸುತ್ತಾದಾದರೂ ವಿಶ್ವಕ್ಕೆಲ್ಲಾ ಈಶ್ವರನಾದ ಪುರುಷನನ್ನು 'ನಾರಾಯಣ'ನೆಂಬ ಪದದಿಂದ ಸಂಬೋಧಿಸಿ ಅವನನ್ನು ಅತ್ಯಂತ ಶ್ರೇಷ್ಠವಾದ ವಿವರಣೆಯಿಂದ ವರ್ಣಿಸುತ್ತದೆ. ಉಳಿದ ಅರ್ಧ ಭಾಗವು ನಾರಾಯಣನ ಆಯತನ (ಮನೆ)ವಾದ ಹೃದಯವನ್ನು ಶಾರೀರಕವಾಗಿ ವರ್ಣಿಸುತ್ತದೆ. ಜೊತೆಗೆ ಯೋಗ ಅಥವಾ ಜ್ಞಾನದ ಸಹಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ಆ ಹೃದಯವನ್ನು ಪ್ರವೇಶಿಸಿದಾಗ ಕಾಣಬರುವ ನಾರಾಯಣನ ಜ್ಯೋತಿರ್ಮಯವಾದ ರೂಪವನ್ನು ಪ್ರಕಾಶ ಪಡಿಸುತ್ತದೆ. ಹಾಗೂ ಅಮೋಘವಾದ ಅನುಭವಗಳನ್ನೂ ಮತ್ತು ದರ್ಶನಗಳನ್ನೂ ಹೇಳುತ್ತದೆ.

ಈ ಮಂತ್ರವು ಅಷ್ಟಾಂಗ ಯೋಗಸಾರವನ್ನೆಲ್ಲಾ ಒಳಗೊಂಡಿದೆ. ಇದರಲ್ಲಿ ವಿವರಿಸಿರುವ ಅಂಶಗಳನ್ನು ಮನಸ್ಸಿನಲ್ಲಿ ಅವಧರಿಸಿ ಅಷ್ಟಾಂಗ ಯೋಗವನ್ನು ಅನುಸರಿಸುವವನು ಅದರ ಗುರಿಯನ್ನು ಮುಟ್ಟುತ್ತಾನೆಂಬುದರಲ್ಲಿ ಸಂಶಯವಿಲ್ಲ. ಇದು ಯೋಗಮಾರ್ಗದಲ್ಲಿ ಕಾಲಿಟ್ಟವನಿಗೆ ಆಗುವ ಅಮೋಘವಾದ ಅನುಭವಗಳನ್ನೂ, ಕಾಣುವ ಸ್ಪಷ್ಟಕರವಾದ ದರ್ಶನಗಳನ್ನೂ ಚಿತ್ರಿಸುತ್ತದೆ ಮತ್ತು ಜ್ಞಾನೋಪಾಸನೆಯ ಪರಮ ಲಕ್ಷ್ಯವೇನೆಂಬುದನ್ನು ತಿಳಿಸುತ್ತದೆ.

ಈ ಸೂಕ್ತವು ದ್ರಾವಿಡ ಪಾಠಾನುಸಾರವಾಗಿ ಕೇವಲ ಹನ್ನೆರಡು ಋಕ್ಕುಗಳುಳ್ಳದ್ದಾಗಿದೆ.

ಇದೇ ಲೇಖಕರ ಉಪಯುಕ್ತ ಸಂಗ್ರಹಗಳು

- **ಶ್ರೀಸೂಕ್ತಮ್**
  ಮೂಲಶ್ಲೋಕಗಳು – ಪದಶಃ ಅರ್ಥ–ವಿವರಣೆ
- **ಪುರುಷಸೂಕ್ತಮ್**
  ಮೂಲಶ್ಲೋಕಗಳು – ಪದಶಃ ಅರ್ಥ–ವಿವರಣೆ
- **ತರ್ಪಣ ವಿಧಿ-ವಿಧಾನ**
  ಅನುಷ್ಠಾನಕ್ರಮ ಹಾಗೂ ವೈಜ್ಞಾನಿಕದೃಷ್ಟಿ

ಪ್ರತಿಗಳಿಗೆ :

ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

ಚಿಕ್ಕಪೇಟೆ, ಬೆಂಗಳೂರು–560 053. ದೂರವಾಣಿ : 22258217

Sri Vidyabharathi Book Centre, Sringeri

CC-O. In Public Domain. Digitized by eGangotri

ಸಸ್ವರ

ಮಂತ್ರಪುಷ್ಪಮ್

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ।
ಭದ್ರಂ ಪಶ್ಯೇ ಮಾಕ್ಷಭಿರ್ಯಜತ್ರಾಃ । ಸ್ಥಿರೈರಂಗೈ ಸ್ತು
ಷ್ಟುವಾಗ್ಂ ಸಸ್ತನೂಭಿಃ । ವ್ಯಶೇಮ ದೇವಹಿತಂ ಯದಾಯುಃ ॥

ಓಂ ॥ ಯೋಽಪಾಂ ಪುಷ್ಪಂ ವೇದ । ಪುಷ್ಪವಾನ್ ಪ್ರಜಾವಾನ್ ।
ಪಶುಮಾನ್ ಭವತಿ । ಚಂದ್ರಮಾ ವಾ ಅಪಾಂ ಪುಷ್ಪಮ್ ।
ಪುಷ್ಪವಾನ್ ಪ್ರಜಾವಾನ್ ಪಶುಮಾನ್ ಭವತಿ । ಯ ಏವಂ ವೇದ ।
ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥೧॥

ಅಗ್ನಿರ್ವಾ ಅಪಾಮಾಯತನಮ್ । ಆಯತನವಾನ್ ಭವತಿ ।
ಯೋಽಗ್ನೇರಾಯತನಂ ವೇದ । ಆಯತನವಾನ್ ಭವತಿ ।
ಆಪ್ತೋ ವಾ ಅಗ್ನೇರಾಯತನಮ್ । ಆಯತನವಾನ್ ಭವತಿ । ಯ
ಏವಂ ವೇದ । ಯೋಽಪಾಮಾಯತನಂ ವೇದ । ಆಯತನವಾನ್
ಭವತಿ ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಯುರ್ವಾ ಅಪಾಮಾಯತನಮ್ । ಆಯತನವಾನ್
ಭವತಿ । ಯೋ ವಾಯೋರಾಯತನಂ ವೇದ । ಆಯತನವಾನ್
ಭವತಿ । ಆಪೋ ವೈ ವಾಯೋರಾಯತನಮ್ । ಆಯತನವಾನ್
ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ ।
ಆಯತನವಾನ್ ಭವತಿ ॥೩॥

ಅಸೌ ವೈ ತಪನ್ನಪಾಮಾಯತನಮ್ । ಆಯತನವಾನ್
ಭವತಿ । ಯೋಽಮುಷ್ಯ ತಪತ ಆಯತನಂ ವೇದ। ಆಯತನವಾನ್
ಭವತಿ । ಆಪೋ ವಾ ಅಮುಷ್ಯ ತಪತ ಆಯತನಮ್ ।
ಆಯತನವಾನ್ ಭವತಿ। ಯ ಏವಂ ವೇದ ।
ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥೪॥

ಚಂದ್ರಮಾ ವಾ ಅಪಾಮಾಯತನಮ್ । ಆಯತನವಾನ್
ಭವತಿ । ಯಶ್ಚಂದ್ರಮಸ ಆಯತನಂ ವೇದ । ಆಯತನವಾನ್
ಭವತಿ । ಆಪೋ ವೈ ಚಂದ್ರಮಸ ಆಯತನಮ್ । ಆಯತನವಾನ್

CC-O. In Public Domain. Digitized by eGangotri

ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ ।
ಆಯತನವಾನ್ ಭವತಿ ॥೫॥

ನಕ್ಷತ್ರಾಣಿ ವಾ ಅಪಾಮಾಯತನಮ್ । ಆಯತನವಾನ್
ಭವತಿ । ಯೋ ನಕ್ಷತ್ರಾಣಾಮಾಯತನಂ ವೇದ । ಆಯತನವಾನ್
ಭವತಿ । ಆಪೋ ವೈ ನಕ್ಷತ್ರಾಣಾಮಾಯತನಮ್ । ಆಯತನವಾನ್
ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ ।
ಆಯತನವಾನ್ ಭವತಿ ॥೬॥

ಪರ್ಜನ್ಯೋ ವಾ ಅಪಾಮಾಯತನಮ್ । ಆಯತನವಾನ್
ಭವತಿ । ಯಃ ಪರ್ಜನ್ಯಸ್ಯಾಯತನಂ ವೇದ । ಆಯತನವಾನ್
ಭವತಿ । ಆಪೋ ವೈ ಪರ್ಜನ್ಯಸ್ಯಾಯತನಮ್ । ಆಯತನವಾನ್
ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ ।
ಆಯತನವಾನ್ ಭವತಿ ॥೭॥

ಸಂವತ್ಸರೋ ವಾ ಅಪಾಮಾಯತನಮ್ । ಆಯತನವಾನ್

Sri Vidyabharathi Book Centre, Sringeri

CC-O. In Public Domain. Digitized by eGangotri

ಭವತಿ। ಯಸ್ಸಂವಥ್ಸರಸ್ಯಾಯತನಂ ವೇದ। ಆಯತನವಾನ್
ಭವತಿ। ಆಪ್ರೋ ವೈ ಸಂವಥ್ಸರಸ್ಯಾಯತನಮ್। ಆಯತನವಾನ್
ಭವತಿ। ಯ ಏವಂ ವೇದ। ಯೋಽಪ್ಸ್ವನಾವಂ ಪ್ರತಿಷ್ಠಿತಾಂ ವೇದ।
ಪ್ರತ್ಯೇವ ತಿಷ್ಠತಿ ॥೮॥

॥ ಶ್ರೀ ನಾರಾಯಣ ಸೂಕ್ತಮ್ ॥

ಓಂ ಸಹ ನಾವವತು। ಸಹ ನೌ ಭುನಕ್ತು। ಸಹ ವೀರ್ಯಂ
ಕರವಾವಹೈ। ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ। ಓಂ
ಶಾಂತಿಃ ಶಾಂತಿಃ ಶಾಂತಿಃ

ಓಂ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವ ಶಂಭುವಮ್।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ॥

ವಿಶ್ವತಃ ಪರಮಾನ್ನಿತ್ಯಂ ವಿಶ್ವಂ ನಾರಾಯಣಗ್ಂ ಹರಿಮ್।
ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ ॥

ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್।
ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ॥

CC-O. In Public Domain. Digitized by eGangotri

ನಾರಾಯಣ ಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ।
ನಾರಾಯಣ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ ॥

ನಾರಾಯಣ ಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ ॥
ಯಚ್ಚಕಿಂಚಿಜ್ಜಗತ್ಸರ್ವಂ ದೃಶ್ಯತೋ ಶ್ರೂಯತೇಽಪಿವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

ಅನಂತಮವ್ಯಯಂ ಕವಿಗ್ಂ ಸಮುದ್ರೇಽಂತಂ
ವಿಶ್ವಶಂಭುವಮ್ ।

ಪದ್ಮಕೋಶ ಪ್ರತೀಕಾಶಗ್ಂ ಹೃದಯಂ ಚಾಪ್ಯಧೋ–
ಮುಖಮ್ ॥

ಅಧೋನಿಷ್ಟ್ಯಾ ವಿತಸ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।
ಜ್ವಾಲಮಾಲಾ ಕುಲಂ ಭಾತೀ ವಿಶ್ವಮಾಸ್ಯಾಯತನಂ ಮಹತ್ ॥

ಸಂತತಗ್ಂ ಶಿಲಾಭಿಸ್ತುಲಂಬತ್ಯಾಕೋಶ ಸನ್ನಿಭಮ್। ತಸ್ಯಾಂತೇ
ಸುಷಿರಗ್ಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್ ॥

CC-O. In Public Domain. Digitized by eGangotri

ತಸ್ಯ ಮಧ್ಯೇ ಮಹಾನಗ್ನಿರ್ವಿಶ್ವಾರ್ಚಿರ್ವಿಶ್ವ ತೋ ಮುಖಃ ।

ಸೋಽಗ್ರಭುಗ್ವಿ ಭಜನ್ ತಿಷ್ಠನ್ನಾಹಾರಮಜರಃ ಕವಿಃ ।

ತಿರ್ಯಗೂರ್ಧ್ವ ಮಧಶ್ಶಾಯೀ ರಶ್ಮ ಯಸ್ತಸ್ಯ ಸಂತತಾ ।

ಸಂತಾಪಯತಿ ಸ್ವಂ ದೇಹ ಮಾಪಾದತಲಮಸ್ತಕಃ ।

ತಸ್ಯ ಮಧ್ಯೇ ವಹ್ನಿ ಶಿಖಾ ಅಣೀಯೋರ್ದ್ಧ್ವಾ ವ್ಯವಸ್ಥಿತಃ ।

ನೀಲತೋಯದ ಮಧ್ಯಸ್ಥಾದ್ವಿದ್ಯುಲ್ಲೇಖೇವ ಭಾಸ್ವರಾ ।

ನೀವಾರಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ।

ತಸ್ಯಾಶ್ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ । ಸ ಬ್ರಹ್ಮ

ಸ ಶಿವಸ್ಸಹರಿಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ ್ವರಾಟ್ ॥

ಓತದ್ ಬ್ರಹ್ಮ। ಓಂ ತದ್ವಾಯುಃ। ಓಂ ತದಾತ್ಮಾ।

ಓಂ ತತ್ಸತ್ಯಮ್। ಓಂ ತತ್ ಸರ್ವಮ್। ಓಂ ತತ್ ಪುರೋರ್ನಮಃ

ಅಂತಶ್ಚರತಿ ಭೂತೇಷು ಗುಹಾಯಾಂ ವಿಶ್ವಮೂರ್ತಿಷು । ತ್ವಂ

ಯಜ್ಞ ಸ್ತ್ವಂ ವಷಟ್‌ಕಾರ ಸ್ತ್ವಮಿಂದ್ರ ಸ್ತ್ವಗ್ಂ ರುದ್ರ ಸ್ತ್ವಂ ವಿಷ್ಣುಸ್ತ್ವಂ

CC-O. In Public Domain. Digitized by eGangotri

ಬ್ರಹ್ಮತ್ವಂ ಪ್ರಜಾಪತಿಃ ತ್ವಂ ತದಾಪ ಆಪೋಜ್ಯೋತಿ ರಸೋಽಮೃತಂ

ಬ್ರಹ್ಮ ಭೂರ್ಭುವ ಸ್ಸುವರೋಮ್ ॥

ಸೂಚನೆ : ಈ ಸೂಕ್ತದ ಕೊನೆಯಲ್ಲಿ ಕೆಲವರು ಈ ಕೆಳಗಿನ ಮಂತ್ರ (1) ವನ್ನೂ ಮತ್ತೆ ಕೆಲವರು ಅದರ ಮುಂದಿನ ಮಂತ್ರ (2)ವನ್ನೂ ಹೇಳುವುದು ವಾಡಿಕೆಯಾಗಿದೆ.

(1) ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ

ಅಮೃತತ್ವಮಾನಶುಃ । ಪರೇಣ ನಾಕಂ ನಿಹಿತಂ ಗುಹಾಯಾಂ

ವಿಭ್ರಾಜದೇತದ್ಯತಯೋ ವಿಶಂತಿ । ವೇದಾಂತ ವಿಜ್ಞಾನ ಸುನಿಶ್ಚಿತಾರ್ಥ

ಸ್ಸಂನ್ಯಾಸಯೋಗಾದ್ಯತಯಶ್ಶುದ್ಧಸತ್ತ್ವಾಃ । ತೇ ಬ್ರಹ್ಮಲೋಕೇ ತ್ತು

ಪರಾಂತಕಾಲೇ ಪರಾಮೃತಾತ್ಪರಿ ಮುಚ್ಯಂತಿ ಸರ್ವೇ॥ ದ್ರಹಂವಿಪಾಪಂ

ಪರಮೇಽಶ್ಮ ಭೂತಂ ಯತ್ಪುಂಡರೀಕಂ ಪುರಮಧ್ಯಸಗ್ಗ್ಸ್ಥಮ್ ।

ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತ ಸ್ತದುಪಾಸಿತವ್ಯಮ್॥

ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ ।

ತಸ್ಯ ಪ್ರಕೃತಿ ಲೀನಸ್ಯ ಯಃ ಪರಸ್ಸಮಹೇಶ್ವರಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಋತಗ್ಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣಪಿಙ್ಗಲಮ್ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈ ನಮೋ ನಮಃ॥

ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್॥ ಓಂ ಶಾಂತಿಃ ಶಾಂತಿಃ ಶಾಂತಿಃ॥

ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ । ನಮೋ ವಯಂ
ವೈಶ್ರವಣಾಯ ಕುರ್ಮಹೇ । ಸ ಮೇ ಕಾಮಾನ್ಕಾಮಕಾಮಾಯ
ಮಹ್ಯಮ್। ಕಾಮೇಶ್ವರೋ ವೈಶ್ರವಣೋ ದದಾತು ಕುಬೇರಾಯ
ವೈಶ್ರವಣಾಯ ಮಹಾರಾಜಾಯ ನಮಃ। ಯೋ ವೈ ತಾಂ ಬ್ರಹ್ಮಣೋ
ವೇದ । ಅಮೃತೇ ನಾವೃತಾಂ ಪುರೀಮ್ । ತಸ್ಮೈ ಬ್ರಹ್ಮ ಚ ಬ್ರಹ್ಮಾ
ಚ । ಆಯುಃ ಕೀರ್ತಿಂ ಪ್ರಜಾಂದದುಃ ॥

ಓಂ ತತ್ಪುರುಷಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ।
ತನ್ನೋ ದಂತಿಃ ಪ್ರಚೋದಯಾತ್

ಓಂ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ ।
ತನ್ನೋ ರುದ್ರಃ ಪ್ರಚೋದಯಾತ್

CC-O. In Public Domain. Digitized by eGangotri

ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್

ಓಂ ಕಾತ್ಯಾಯನಾಯ ವಿದ್ಮಹೇ ಕನ್ಯಾಕುಮಾರಿ ಧೀಮಹಿ
ತನ್ನೋ ದುರ್ಗಿಃ ಪ್ರಚೋದಯಾತ್ ॥

ಓಂ ಮಹಾಲಕ್ಷ್ಮ್ಯೈ ಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿ
ತನ್ನೋ ಲಕ್ಷ್ಮೀಃ ಪ್ರಚೋದಯಾತ್ ।

ಓಂ ಭಾಸ್ಕರಾಯ ವಿದ್ಮಹೇ ದಿವಾಕರಾಯ ಧೀಮಹಿ ।
ತನ್ನೋ ಸೂರ್ಯಃ ಪ್ರಚೋದಯಾತ್ ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

CC-O. In Public Domain. Digitized by eGangotri

॥ ಮಂತ್ರಪುಷ್ಪಮ್ ॥

(ತಾತ್ಪರ್ಯ ಸಹಿತ)

ಮಂತ್ರ

ಯೋ೭ಪಾಂ ಪುಷ್ಪಂ ವೇದ । ಪುಷ್ಪವಾನ್ ಪ್ರಜಾವಾನ್ ಪಶುಮಾನ್ ಭವತಿ । ಚಂದ್ರಮಾ ವಾ ಅಪಾಂ ಪುಷ್ಪಮ್ । ಪುಷ್ಪವಾನ್ ಪ್ರಜಾವಾನ್ ಪಶುಮಾನ್ ಭವತಿ । ಯ ಏವಂ ವೇದ ಯೋ೭ಪಾಮಾಯತನಂ ವೇದ ಆಯತನವಾನ್ ಭವತಿ ॥

ತಾತ್ಪರ್ಯ

ನಾಲ್ಕು ವೇದಗಳಲ್ಲಿಯೂ ನೀರನ್ನೂ ಮತ್ತು ತಂದತರ್ಯಾಮಿ ದೇವತೆಯನ್ನು ಬಹಳವಾಗಿ ಹೊಗಳಿದ್ದಾರೆ. ಚಂದ್ರನು ಕ್ಷೀರ ಸಮುದ್ರದಿಂದ ಜನಿಸಿದವನು. ಅದು ಜಲ ಕಾರ್ಯ. ಹಾಗೆಯೇ ಅವನು ಒಂದು ಜಲಪುಷ್ಪ (ಅಪಾಂ ಪುಷ್ಪಂ)ವೆಂದು ಹೇಳಿದೆ. ಈ ಚಂದ್ರನು ಜಲರಾಶಿಯಲ್ಲಿ ಪುಷ್ಪ ಸ್ಥಾನೀಯನು. ಇವನು ಜಲಶರೀರಿ. ಇವನು ಸೌಂದರ್ಯ, ತಂಪು, ಆಹ್ಲಾದಕತೆಗೆ ಹೆಸರಾದವನು. ಜಲದ ಸಾಧ್ಯತೆ ಮತ್ತು ಸಾಮರ್ಥ್ಯಗಳನ್ನು ಯಾವನು ತಿಳಿಯುವನೋ ಅವನು ಪ್ರಪಂಚದಲ್ಲಿ ಸುಖ–ಶಾಂತಿ, ವಿಕಸನ ಮತ್ತು ಲಾವಣ್ಯಾದಿಗಳನ್ನು ಪಡೆಯುತ್ತಾನೆ. ಹೀಗೆ ಜಲವನ್ನೂ, ಅದರ ನಿವಾಸ ಮತ್ತು ಪರಧಿಯನ್ನೂ ಹಾಗೂ ಅದರ ಸಾಮರ್ಥ್ಯವನ್ನೂ ಈ ರೀತಿಯಾಗಿ ಯಾರು ತಿಳಿಯುವರೋ ಅವರು ಹೂವಿನಂತೆ ಜನಪ್ರಿಯರೂ (ಪುಷ್ಪವಂತರೂ), ಸುಪ್ರಜರೂ ಮತ್ತು ಪಶು ಸಂಪತ್ಸಮೃದ್ಧಿಯಿಂದ ಕೂಡಿದವರೂ, ಉತ್ತಮ ಆಶ್ರಯವುಳ್ಳವರೂ ಆಗುವರು.

CC-O. In Public Domain. Digitized by eGangotri

ಮಂತ್ರ

ಅಗ್ನಿರ್ವಾ ಅಪಾಮಾಯತನಮ್ । ಆಯತನವಾನ್ ಭವತಿ । ಯೋಽಗ್ನೇರಾಯತನಂ ವೇದ ॥ ಆಯತನವಾನ್ ಭವತಿ । ಆಪೋ ವಾ ಅಗ್ನೇರಾಯತನಮ್ । ಆಯತನವಾನ್ ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥

ತಾತ್ಪರ್ಯ

ಅಗ್ನಿಯು ಜಲಕ್ಕೆ ಆಶ್ರಯ (ಅಗ್ನೇರಾಪಃ ಎಂಬುದು ಶ್ರುತಿವಾಕ್ಯ). ಅವಾಂತರ ಸೃಷ್ಟಿಯಲ್ಲಿ ನೀರೇ ಮೊದಲಿರುತ್ತದೆ. 'ಆಪೋವಾ ಇದಮಾಸನ್ ಸಲಿಲಮೇವ' ಎಂಬ ಶ್ರುತಿ ವಾಕ್ಯದಂತೆ ಆ ನೀರೇ ಅಗ್ನಿಗೆ ಆಶ್ರಯ. ಹೀಗೆ ಪರಸ್ಪರ ಅಗ್ನಿಯ ಆಶ್ರಯವನ್ನೂ, ನೀರಿನ ಆಶ್ರಯವನ್ನೂ ಯಾರು ತಿಳಿಯುತ್ತಾರೋ ಅವರೂ ಸಹ ಉತ್ತಮ ಆಶ್ರಯವುಳ್ಳವರಾಗುತ್ತಾರೆ.

ಮಂತ್ರ

ವಾಯುರ್ವಾ ಅಪಾಮಾಯತನಮ್ । ಆಯತನವಾನ್ ಭವತಿ । ಯೋ ವಾಯೋರಾಯತನಂ ವೇದ । ಆಯತನವಾನ್ ಭವತಿ । ಆಪೋ ವೈ ವಾಯೋರಾಯತನಮ್ । ಆಯತನವಾನ್ ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥

ತಾತ್ಪರ್ಯ

ಮಹಾಸೃಷ್ಟಿಯಲ್ಲಿ 'ವಾಯೋರಗ್ನಿಃ ಅಗ್ನೇರಾಪಃ' ಎಂದು ಶ್ರುತಿಯು ಹೇಳುತ್ತದೆ. ಅಗ್ನಿಗೆ ವಾಯುವು ಕಾರಣ. ಆದ್ದರಿಂದ ಜಲವು ವಾಯುವಿನಿಂದಲೂ ಉತ್ಪತ್ತಿಯಾದಂತೆಯೇ ಆಯಿತು. ಅಂದರೆ ಅಗ್ನಿ ವಾಯುಗಳು ಜಲಕ್ಕೆ ಆಯತನ (ಆಶ್ರಯದಾತರು) ರಾಗಿರುತ್ತಾರ. ವಾಯುವಿಗೆ ನೀರೇ ಆಧಾರ. ಹೀಗೆ ತಿಳಿದು ಉಪಾಸಿಸುವವರೋ ಒಳ್ಳೆಯ ಆಶ್ರಯವುಳ್ಳವರಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರ

ಅಸೌ ವೈ ತಪನ್ನಪಾಮಾಯತನಮ್ । ಆಯತನವಾನ್ ಭವತಿ । ಯೋಽಮುಷ್ಯ ತಪತ ಆಯತನಂ ವೇದ । ಆಯತನವಾನ್ ಭವತಿ । ಆಪೋ ವಾ ಅಮುಷ್ಯ ತಪತ ಆಯತನಮ್ ॥ ಆಯತನವಾನ್ ಭವತಿ । ಯ ಏವಂ ವೇದ । ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥

ತಾತ್ಪರ್ಯ

ಸೂರ್ಯನೂ ತೇಜೋದ್ರವ್ಯಪಾದ್ದರಿಂದ ಅವನೂ ಜಲಕ್ಕೆ ಆಯತನನು. ಇದನ್ನೇ 'ಅಸೌ ವೈ ತಪನ್' ಎಂದು ತಿಳಿಸಿದೆ. 'ಆದಿತ್ಯಾಜ್ಜಾಯತೇ ವೃಷ್ಟಿಃ' ಎಂದು ಶ್ರುತಿಯು ಹೇಳುವಂತೆ ತೇಜೋಮಯನಾಗಿ ಪ್ರಜ್ವಲಿಸುವ ಸೂರ್ಯನೇ ನೀರಿಗೆ ಆಧಾರ. ಅವಾಂತರ ಸೃಷ್ಟಿಯಲ್ಲಿ ಸೂರ್ಯನಿಗೆ ಜಲವೇ ಆಧಾರ. ಹೀಗೆ ತಿಳಿದವರು ಉತ್ತಮ ಆಶ್ರಯವನ್ನು ಪಡೆಯುವರು.

ಮಂತ್ರ

ಚಂದ್ರಮಾ ವಾ ಅಪಾಮಾಯತನಮ್ । ಆಯತನವಾನ್ ಭವತಿ। ಯಶ್ಚಂದ್ರಮಸ ಆಯತನಂ ವೇದ । ಆಯತನವಾನ್ ಭವತಿ । ಆಪೋ ವೈ ಚಂದ್ರಮಸ ಆಯತನಮ್ । ಆಯತನವಾನ್ ಭವತಿ ॥ ಯ ಏವಂ ವೇದ ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ॥

ತಾತ್ಪರ್ಯ

ಚಂದ್ರನೂ ನೀರಿಗೆ ಆಶ್ರಯನು. ಸೂರ್ಯ ಚಂದ್ರರ ಸಂಚಾರದಿಂದಲೇ ಹಗಲು–ರಾತ್ರಿಗಳು, ಮಳೆ–ಚಳಿ–ಬೇಸಿಗೆ ಕಾಲಗಳು ಸಂಭವಿಸುತ್ತವೆ. ಅವಾಂತರ ಸೃಷ್ಟಿಯಲ್ಲಿ ಜಲವೇ ಚಂದ್ರನಿಗೆ ಆಧಾರ. ಈ ರೀತಿಯಾಗಿ ತಿಳಿದು ಯಾರು ಉಪಾಸಿಸುವರೋ ಅವರು ಉತ್ತಮ ಆಶ್ರಯವುಳ್ಳವರಾಗುತ್ತಾರೆ.

CC-O. In Public Domain. Digitized by eGangotri

ಮಂತ್ರ

ನಕ್ಷತ್ರ್ಯಾಣಿ ವಾ ಅಪಾಮಾಯತನಮ್ । ಆಯತನವಾನ್ ಭವತಿ । ಯೋ ನಕ್ಷತ್ರ್ಯಾಣಾಮಾಯತನಂ ವೇದ । ಆಯತನವಾನ್ ಭವತಿ । ಆಪೋ ವೈ ನಕ್ಷತ್ರ್ಯಾಣಾಮಾಯತನಮ್ । ಆಯತನವಾನ್ ಭವತಿ । ಯ ಏವಂ ವೇದ ।। ಯೋಽಪಾಮಾಯತನಂ ವೇದ । ಆಯತನವಾನ್ ಭವತಿ ।।

ತಾತ್ಪರ್ಯ

ಅನೇಕ ನಕ್ಷತ್ರಗಳು ಮಳೇ ನಕ್ಷತ್ರಗಳೆಂದೇ ಪ್ರಸಿದ್ಧಿಯಾಗಿವೆ (ಪೂರ್ವಾಭಾದ್ರದಿಂದ ಎಶಾಖ ನಕ್ಷತ್ರಗಳು ಪೂರ್ತಾ). ಪುಷ್ಯ, ಆಶ್ಲೇಷಾ ಮುಂತಾದ ಮಹಾ ನಕ್ಷತ್ರಗಳಲ್ಲಿ ಸೂರ್ಯನಿರುವಾಗ ಮಳೆಯು ಹೆಚ್ಚಾಗಿ ಬರುವುದು. ಹೀಗೆ ನಕ್ಷತ್ರಗಳೂ ಜಲಕ್ಕೆ ಆಯತನಗಳೆನಿಸಿವೆ. ಅವಾಂತರ ಸೃಷ್ಟಿಯಲ್ಲಿ ನೀರೇ ನಕ್ಷತ್ರಗಳಿಗೆ ಆಧಾರ. ಇಂತಹ ಆಶ್ರಯಗಳನ್ನು ಯಾರು ತಿಳಿದು ಉಪಾಸಿಸುತ್ತಾರೋ ಅವರು ಉತ್ತಮ ಆಶ್ರಯವುಳ್ಳವರಾಗುತ್ತಾರೆ.

ಮಂತ್ರ

ಪರ್ಜನ್ಯೋ ವಾ ಅಪಾಮಾಯತನಮ್। ಆಯನತವಾನ್ ಭವತಿ। ಯಃ ಪರ್ಜನ್ಯಸ್ಯಾಯತನಂ ವೇದ। ಆಯತನವಾನ್ ಭವತಿ। ಆಪೋ ವೈ ಪರ್ಜನ್ಯಸ್ಯಾಯತನಮ್ । ಆಯತನವಾನ್ ಭವತಿ । ಯ ಏವಂ ವೇದ। ಯೋಽಪಾಮಾಯತನಂ ವೇದ। ಆಯತನವಾನ್ ಭವತಿ।।

ತಾತ್ಪರ್ಯ

ಪರ್ಜನ್ಯನೂ ಜಲಕ್ಕೆ ಆಯತನವಾಗಿದ್ದಾನೆ. ಪರ್ಜನ್ಯ ಎಂಬುದು ವೃಷ್ಟ್ಯಭಿಮಾನಿ ದೇವತೆಯೇ ಆಗಿದೆ. ಆದ್ದರಿಂದ ಅದು ಜಲದ ಆಯತನವೆಂಬುದು ಸರಿಯಾಗಿದೆ. ಅವಾಂತರ ಸೃಷ್ಟಿಯಲ್ಲಿ ನೀರೆ ಪರ್ಜನ್ಯನಿಗೆ ಆಧಾರ. ಹೀಗೆ ತಿಳಿದು ಯಾರು ಉಪಾಸಿಸುವರೋ ಅವರು ಉತ್ತಮ ಆಶ್ರಯವುಳ್ಳವರಾಗುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಂತ್ರ

ಸಂವಥ್ಸರೋ ವಾ ಅಪಾಮಾಯತನಮ್ । ಆಯತನವಾನ್ ಭವತಿ । ಯಃ ಸಂವಥ್ಸರಸ್ಯಾಯತನಂ ವೇದ । ಆಯತನವಾನ್ ಭವತಿ । ಆಪೋ ವೈ ಸಂವಥ್ಸರಸ್ಯಾಯತನಮ್ । ಆಯತನವಾನ್ ಭವತಿ । ಯ ಏವಂ ವೇದ। ಯೋಽಪ್ಸ್ವನಾವಂ ಪ್ರತಿಷ್ಠಿತಾಂ ವೇದ। ಪ್ರತ್ಯೇವ ತಿಷ್ಠತಿ॥

ತಾತ್ಪರ್ಯ

ಕಡೆಯದಾಗಿ ಏಳನೆಯ 'ಸಂವತ್ಸರ' ದೇವತೆ. ಈತನನ್ನು ಪ್ರಜಾಪತಿಯೆಂದು ಉಪನಿಷತ್ತುಗಳು ಹೊಗಳುತ್ತವೆ. ವರ್ಷ ಋತುವಿನ ಮೂಲಕ ಸಂವತ್ಸರವು ನೀರಿಗೆ ಕಾರಣವಾಗಿದೆ. ಸಕಲಲೋಕಗಳೇ ನೌಕೆಗಳು, ಇವು ಸ್ಥಿರವಾಗಿವೆ. ಇದರಿಂದ ಎಲ್ಲಾ ಲೋಕಗಳಿಗೂ ನೀರೇ ಆಧಾರವೆಂದಾಯಿತು. ಹೀಗೆ ಜಲದೇವತೆಯ ವಾಸಸ್ಥಾನಗಳನ್ನು ಚಿಂತಿಸುವವರು ಶ್ರೇಷ್ಠವಾದ–ಉತ್ತಮವಾದ ಆಶ್ರಯವುಳ್ಳವರಾಗಿ ಪ್ರತಿಷ್ಠಿತರಾಗುವರು.

॥ ಶ್ರೀ ನಾರಾಯಣ ಸೂಕ್ತಮ್ ॥

(ತಾತ್ಪರ್ಯ ಸಹಿತ)

ಮಂತ್ರ

ಹರಿಃ ಓಂ ॥ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ ।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ॥1॥

ತಾತ್ಪರ್ಯ

ಸಕಲ ಬ್ರಹ್ಮಾಂಡವೂ ಭಗವಂತನ ಒಂದಂಶ ಮಾತ್ರ. ಆ ಪರಮಾತ್ಮನು ಅಪರಿಮಿತ ತಲೆಗಳುಳ್ಳವನು (ಸಹಸ್ರ ಶೀರ್ಷ) ಅಂದರೆ ಪ್ರಪಂಚದಲ್ಲಿರುವ ಜೀವರುಗಳ ತಲೆಗಳೆಲ್ಲವೂ ಆ ಪುರುಷನ ತಲೆಗಳೇ ಆಗಿದ್ದು ಅವನು ಸಹಸ್ರ ಶೀರ್ಷನಾಗಿರುವನು. ನಮ್ಮ ಸಕಲ ಇಂದ್ರಿಯಗಳು ಅವನವೇ. ಹಾಗಾಗಿ

CC-O. In Public Domain. Digitized by eGangotri

ಅವನು ಎಶ್ವಾಕ್ಷನೂ ಆಗಿರುವನು. 'ಶಂ' ಎಂದರೆ ಜಗತ್ತಿಗೆ ಸುಖವನ್ನು ದಯಪಾಲಿಸುವವನು. ಅಂದರೆ ಅವನು ವಿಶ್ವ–ಶಂ–ಭು ವಾಗಿರುತ್ತಾನೆ. ಮಡಿಕೆ–ಕುಡಿಕೆಗಳಿಗೆ ಮಣ್ಣು ಉಪಾದಾನವಾಗಿರುವಂತೆ ಪರಮಾತ್ಮನು ಪಂಚಭೂತಗಳಲ್ಲಿ ಆವರಿಸಿರುವುದರಿಂದ ಅವನು ತಾನೇ ಎಲ್ಲವೂ ಆಗಿರುತ್ತಾನೆ. ಅಂದರೆ ಅವನು ವಿಶ್ವಾತ್ಮಕನು, ಸರ್ವಾತ್ಮಕನು. ಎಲ್ಲರಿಗೂ ಪರಮವಾಗಿ ಪಡೆಯಬೇಕಾಗಿರುವ ಸ್ಥಾನನೂ ಆಗಿರುತ್ತಾನೆ. ಜೀವರುಗಳ ಉತ್ಪತ್ತಿಗೆ ಮೂಲವಾದ ನೀರಿಗೆ ಅಯನ ಅಂದರೆ ಆಧಾರಭೂತನೂ, ಆಶ್ರಯಸ್ಥಾನನೂ ಆಗಿರುವುದರಿಂದ ಆ ಪರಮಾತ್ಮನೇ ನಾರಾಯಣನು. ಇವನು ನಾಶರಹಿತನಾದುದರಿಂದ ಅಕ್ಷರನೂ ಆಗಿರುವನು. ಈ ಭಗವಂತನೇ ಜ್ಞಾನಿಗಳಿಗೆ ಪರಮ ಪದ ಅಂದರೆ ಪ್ರಾಪ್ಯಸ್ಥಾನನೂ ಆಗಿ ಜ್ಞಾನಾಶ್ರಯನೂ ಆಗಿರುತ್ತಾನೆ. ಇಂತಹ ಪರಮೇಶ್ವರನನ್ನು, ನಾರಾಯಣನನ್ನು ಹೃದಯ ಪುಂಡರೀಕದಲ್ಲಿ ಉಪಾಸಿಸಬೇಕು.

ಮಂತ್ರ

ವಿಶ್ವತಃ ಪರಮಾನ್ನಿತ್ಯಂ ವಿಶ್ವಂ ನಾರಾಯಣಮ್ ಹರಿಮ್ ।
ವಿಶ್ವಮೇವೇದಂ ಪುರುಷಸ್ತದ್ವಿಶ್ವ ಮುಪಜೀವತಿ ॥

ತಾತ್ಪರ್ಯ

ಈ ಮಂತ್ರದಲ್ಲಿ ನಾರಾಯಣನ ಸ್ವರೂಪವನ್ನು 'ವಿಶ್ವರೂಪ ಮತ್ತು 'ಸ್ವ ಸ್ವರೂಪ' ಎಂದು ಎರಡು ಬಗೆಯಾಗಿ ವರ್ಣಿಸಿದೆ. ಸ್ವರೂಪವೇ ಪರಮಾರ್ಥವಾದುದು. ಜಗದ್ರೂಪವು ಅವನ ಮಹಿಮೆಯಾಗಿರುವುದು. ಆದ್ದರಿಂದ ಆ ನಾರಾಯಣನು ಜಗತ್ತಿಗಿಂತ ಉತ್ಕೃಷ್ಟನೂ, ನಿತ್ಯನೂ ಆಗಿರುವನು. ನಾರಾಯಣ ತತ್ತ್ವವೂ ಜಗತ್ತಿಗೆ ಕಾರಣವಾಗಿದ್ದರೂ ಅದು ಜಗತ್ತಿಗಿಂತ ವಿಲಕ್ಷಣವೂ ಉತ್ಕೃಷ್ಟವು ಆಗಿರುವುದರಿಂದ ಅವನು 'ವಿಶ್ವತಃ ಪರಮಮ್' ಎಂದು ವರ್ಣಿಸಲಾಗಿದೆ. ನಿತ್ಯ ಶುದ್ಧ ಬುದ್ಧ ಮುಕ್ತನಾಗಿ ಎಲ್ಲಾ ಶರೀರಗಳಲ್ಲಿಯೂ ಇರುವ ಶ್ರೀಹರಿಯು, ಪುರುಷನೂ ಆದ ಈ ನಾರಾಯಣನೇ ವಿಶ್ವವೆಲ್ಲವೂ ಆಗಿರುವನು. ಬೆಂಕಿಗೆ ಸುಡುವ ಶಕ್ತಿಯಾಗಲೀ,

CC-O. In Public Domain. Digitized by eGangotri

ಪ್ರಕಾಶ ಸಾಮರ್ಥ್ಯವಾಗಲೀ ಇರುವುದಿಲ್ಲ. ಅದು ತಾನು ತೋರಿಸಿಕೊಳ್ಳಲು ಕಟ್ಟಿಗೆಯನ್ನು ಆಶ್ರಯಿಸಿಕೊಂಡಿದೆ. ಅದರಂತೆ ವಿಶ್ವವು ನಾರಾಯಣನ ಸಾನ್ನಿಧ್ಯವನ್ನು ಪ್ರಕಟಿಸುವ ಉಪಾದಿಯಾಗಿದೆ. ಅಂದರೆ ಈ ನಾರಾಯಣನು ಸೃಷ್ಟಿಯೇ ಮೊದಲಾದ ಜಗತ್ತಿನ ಎಲ್ಲಾ ವ್ಯಾಪಾರಗಳಿಗೂ ಈ ಜಗತ್ತನ್ನೇ ಆಶ್ರಯಮಾಡಿಕೊಂಡಿರುತ್ತಾನೆ.

ಮಂತ್ರ

ಪತಿಂ ವಿಶ್ವಸ್ಯಾತ್ಮೇಶ್ವರಗ್ಂ ಶಾಶ್ವತಗ್ಂ ಶಿವಮಚ್ಯುತಮ್ ।
ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಮ್ ॥

ತಾತ್ಪರ್ಯ

ಈ ಮಂತ್ರವು ನಾರಾಯಣನನ್ನು ಸುಂದರವಾಗಿ ವರ್ಣಿಸುತ್ತದೆ. ನಾಮರೂಪ ರಹಿತನಾದ ಆ ನಾರಾಯಣನೇ ಈ ಪ್ರಪಂಚಕ್ಕೆಲ್ಲ ಪತಿ (ಒಡೆಯ)ಯೂ, ಆತ್ಮನೂ, ಈಶ್ವರನೂ ಆಗಿರುವನು. ಅವನು ಉಪಾಸ್ಯನೂ ಆಗಿರುವನು. ಅವನು ಶಾಶ್ವತನೂ, ಶಿವನೂ (ಮಂಗಳ ಸ್ವರೂಪನೂ), ತನ್ನ ಸ್ವರೂಪದಿಂದ ಜಾರದ ಅಚ್ಯುತನೂ, ಪರಮ ಗತಿಯೂ (ಪರಾಯಣನೂ) ಆಗಿರುವನು. ಇವನು ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿಯನ್ನೆಲ್ಲಾ ವ್ಯಾಪಿಸಿಕೊಂಡು ಸ್ವತಃ ತನ್ನಲ್ಲಿ ಯಾವ ವಿಭಾಗವೂ ಇಲ್ಲದೇ ಅಖಂಡ ಚೈತನ್ಯನಾಗಿರುವ ನಾರಾಯಣನು ಮಹಾಜ್ಞೇಯನಾಗಿರುವನು ('ಜ್ಞೇ' ಎಂದರೆ ಅರಿಯಲ್ಪಡಬೇಕಾದ ವಸ್ತು ಎಂದರ್ಥ).

ಮಂತ್ರ

ನಾರಾಯಣ ಪರೋಜ್ಯೋತಿರಾತ್ಮಾ ನಾರಾಯಣಃ ಪರಃ ।
ನಾರಾಯಣ ಪರಂ ಬ್ರಹ್ಮ ತತ್ತ್ವಂ ನಾರಾಯಣಃ ಪರಃ ॥

ತಾತ್ಪರ್ಯ

ನಾರಾಯಣನು ಎಲ್ಲಾ ಪ್ರಾಣಿಗಳ ಹಾಗೂ ಎಲ್ಲಾ ವಸ್ತುಗಳ ತಿರುಳೂ ಆಗಿರುತ್ತಾನೆ. ಅವನು ಎಲ್ಲವನ್ನೂ ವ್ಯಾಪಿಸಿಕೊಂಡಿರುವುದರಿಂದ

CC-O. In Public Domain. Digitized by eGangotri

ಎಲ್ಲಕ್ಕಿಂತಲೂ ಮಿಗಿಲಾಗಿದ್ದಾನೆ. ಅವನು ಪರಂ ಜ್ಯೋತಿಯೂ ಆಗಿದ್ದಾನೆ. ಏಕೆಂದರೆ ಎಲ್ಲವನ್ನೂ ತನ್ನ ನಿತ್ಯ ಚೈತನ್ಯ ಪ್ರಕಾಶದಿಂದ ಬೆಳಗುತ್ತಿರುವನು. (ತಸ್ಯ ಭಾಸಾ ಸರ್ವಮಿದಂ ವಿಭಾತಿ–ಶ್ರುತಿ). ಅಂದರೆ ಅವನೊಬ್ಬನೇ ನಿಜವಾಗಿ ಇರುವವನು. ಹಾಗೆಯೇ ಅವನ ಇರುವಿಕೆಯೇ ಇತರ ಎಲ್ಲಾ ವಸ್ತುಗಳಲ್ಲಿಯೂ ಸತ್ತಾಮಾತ್ರವಾಗಿ ತೋರಿಕೊಳ್ಳುತ್ತಿರುವುದು. 'ನಾರಾಯಣಃ ಪರಂ ಬ್ರಹ್ಮ,' ಎಂದರೆ ನಾರಾಯಣನೇ ಸತ್ಯಜ್ಞಾನಾನಂತ ಲಕ್ಷಣನಾದ ಪರಬ್ರಹ್ಮವು ಎಂದರ್ಥ. 'ತತ್' ಎಂದರೆ – ಸರ್ವವೂ ಬ್ರಹ್ಮವೇ, ಆ ಬ್ರಹ್ಮದ ಭಾವ (ಇರುವಿಕೆ)ವೇ ತತ್ತ್ವವೆನಿಸುವುದು. ಅಂದರೆ, ಏಕಮೇವ ಅದ್ವಿತೀಯನೂ, ಸಕಲ ಜಗದಾತ್ಮನೂ, ಸತ್ಯ ಜ್ಞಾನಾನಂತ ಲಕ್ಷಣನೂ, ಸತ್ತಾ ಮಾತ್ರ ಸ್ವರೂಪೂ, ಪರಮನೂ, ಪರಾಯಣನೂ ಆಗಿರುವ ನಾರಾಯಣ ಪರಬ್ರಹ್ಮನು ನಮಗೆಲ್ಲರ ಗತಿಯಾಗಿರುವನು ಎಂಬುದು ಈ ಮಂತ್ರದ ಗುರಿ. ಅಂಥಾ ನಾರಾಯಣನನ್ನು ನಾವು ಧ್ಯಾನಿಸಿ ಧನ್ಯರಾಗೋಣ.

ಮಂತ್ರ

ನಾರಾಯಣ ಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ ।

ತಾತ್ಪರ್ಯ

ಧ್ಯಾನಕರ್ತನೂ ನಾರಾಯಣನೇ. ಧ್ಯಾನವೆಂಬ ಮನೋವೃತ್ತಿ ವಿಶೇಷವೂ ನಾರಾಯಣನೇ. ವೇದಾಂತದ ಅಧಿಕಾರಿಯಾದ ಧ್ಯಾನ, ಧಾತೃ ಮತ್ತು ಧ್ಯೇಯಗಳೆಂಬ ಮೂರು ಪದಗಳಿಂದ ವ್ಯವಹೃತನಾಗಿರುವವನೂ ನಾರಾಯಣನೇ. ಇಂತಹವನನ್ನು ಉಪಾಸಕನು ತನ್ನ ಹೃದಯ ಕಮಲ ಮಧ್ಯದಲ್ಲಿ ತೀರ್ವವಾದ ಉಪಾಸನೆಯ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಈ ನಾರಾಯಣನು ಪಾಪಿಗಳಿಗೆ ಶತ್ರುವೂ ಆಗಿರುವನು.

ಮಂತ್ರ

ಯಚ್ಚಕಿಂಚಿಜ್ಜಗಥ್ಸರ್ವಂ ದೃಶ್ಯತೇ ಶ್ರೂಯತೇಽಪಿವಾ ।
ಅಂತರ್ಬಹಿಶ್ಚತಥ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ತಾತ್ಪರ್ಯ

ಈ ಲೋಕದಲ್ಲಿ ಕಾಣುವ ಮತ್ತು ಕೇಳುವ ಯಾವ ನಾಮರೂಪಾತ್ಮಕವಾದ ಜಗತ್ತು ಕಂಡು ಬರುವುದೋ ಆ ಎಲ್ಲಾ ವಸ್ತುಗಳ ಒಳಗೂ, ಹೊರಗೂ, ಎಲ್ಲೆಲ್ಲಿಯೂ ನಾರಾಯಣನು ತಾನೇ ತಾನಾಗಿ ವ್ಯಾಪಿಸಿ ನೆಲಸಿರುತ್ತಾನೆ. ಅಂದರೆ ಪ್ರಪಂಚದ ಸಕಲ ಪದಾರ್ಥಗಳಲ್ಲಿಯೂ ಅವರಿಸಿಕೊಂಡಿರುವನು. ಸಮುದ್ರದಲ್ಲಿರುವ ನೀರು, ತೆರೆ, ನೊರೆ ಮತ್ತು ಮಂಜುಗಡ್ಡೆಯ ರೂಪದಿಂದ ತೋರುವಾಗ ಅದನ್ನು ನೀರೆಂದು ಹೇಳಲು ಬರುವುದಿಲ್ಲ. ಏಕೆಂದರೆ ಅವು ನೀರಿಗಿಂತ ಬೇರೆಯಾಗಿ ವ್ಯವಹರಿಸಲ್ಪಡುತ್ತವೆ. ಆದರೆ ಅವನ್ನು ನೀರಲ್ಲವೆಂದು ಹೇಳುವುದಕ್ಕೂ ಆಗುವುದಿಲ್ಲ. ಏಕೆಂದರೆ ನೀರನ್ನು ಬಿಟ್ಟರೆ ಅವುಗಳಿಗೆ ಇರುವಿಕೆಯೇ ಇಲ್ಲವಾಗುವುದು. ಅದರಂತೆಯೇ ಈ ಪ್ರಪಂಚವು ನಾರಾಯಣನಿಗಿಂತ ಬೇರೆಯೆಂದಾಗಲೀ, ಬೇರೆಯಲ್ಲವೆಂದಾಗಲೀ ಹೇಳಲು ಬರುವುದಿಲ್ಲ. ಇದನ್ನೇ ಅನಿರ್ವಚನೀಯವೆನ್ನುವರು. ತಾತ್ಪರ್ಯವೆಂದರೆ ಪ್ರಪಂಚದ ಒಳಗೂ, ಹೊರಗೂ, ಎಲ್ಲೆಲ್ಲಿಯೂ ಆ ನಾರಾಯಣನೇ ವ್ಯಾಪಿಸಿದ್ದು ಅವನೇ ಅಜ್ಞರಿಗೆ ಪ್ರಪಂಚವಾಗಿ ಕಾಣಿಸುತ್ತಾನೆ. ಈ ಜಗತ್ತೆಲ್ಲವೂ ಯಾವನಲ್ಲಿ ಆರೋಪಿತವಾಗಿರುವುದೋ ಅವನೆ ಇದರ ಸರ್ವಸ್ವವೂ ಆಗಿರುವನು. ಇಂಥ ಅದ್ವಿತೀಯ ನಾರಾಯಣನ ಜ್ಞಾನದಿಂದ ನಾವು ಮುಕ್ತರಾಗಬೇಕು.

ಮಂತ್ರ

'ಅಂತಮವ್ಯಯಂ ಕವಿಗ್ಂ ಸಮುದ್ರೇ೬ಂತಂ ವಿಶ್ವಶಂಭುವಮ್ ।
ಪದ್ಮಕೋಶ ಪ್ರತೀಕಾಶಗ್ಂ ಹೃದಯಂ ಚಾಪ್ಯಧೋಮುಖಮ್ ॥

ತಾತ್ಪರ್ಯ

(ಈ ಮಂತ್ರದ ಪೂರ್ವಾರ್ಧವು ನಾರಾಯಣನ ವಾಸ್ತವ ರೂಪವನ್ನು ಸಂಕ್ಷೇಪವಾಗಿ ಬೋಧಿಸುತ್ತದೆ. ಉತ್ತರಾರ್ಧವು ಅಂಥ ನಾರಾಯಣನನ್ನು ಉಪಾಸಿಸಲು ಸ್ಥಾನ ನಿರ್ದೇಶನ ಮಾಡಿ ಆ ಸ್ಥಾನದ ಸ್ಥಿತಿಯನ್ನು ವಿವರಿಸುತ್ತದೆ. ನಾರಾಯಣನ ನಿವಾಸ ಸ್ಥಾನವಾದ ಹೃದಯವನ್ನು ವರ್ಣಿಸುತ್ತದೆ.).

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನು ಸರ್ವವ್ಯಾಪಕನಾಗಿದ್ದು ಭೂತ ಭವ್ಯ ಭವನ್ನಾಥನಾಗಿರುವುದರಿಂದ ಅವನು ಅನಂತನು ಅವನಿಲ್ಲದ ಕಾಲವಾಗಲೀ, ಸ್ಥಳವಾಗಲೀ ಇರುವುದೇ ಇಲ್ಲ. ಅವನು ಅವ್ಯಯನೂ ಆಗಿರುವನು. ಅಂದರೆ ನಾಶವಿಲ್ಲದವನು; ವಿಕಾರರಹಿತನು. ಈ ಪರಮಾತ್ಮನು ಕ್ರಾಂತದರ್ಶಿ – ಅಂದರೆ ಕಳೆದು ಹೊದದ್ದನ್ನೂ, ಕಣ್ಣಿಗೆ ಕಾಣದ್ದನ್ನೂ, ಇಂದ್ರಿಯಗೋಚರವಲ್ಲದ್ದನ್ನೂ ಬಲ್ಲ ಸರ್ವಜ್ಞನು. ಈ ಅಭಿಪ್ರಾಯದಂತೆ ಪರಮಾತ್ಮನು ಕವಿಯು. ಈ ಪರಮಾತ್ಮನೊಬ್ಬನು ಮಾತ್ರ ಸಂಸಾರಾರ್ಣವವನ್ನು ದಾಟಿಸಲು ಶಕ್ತನು (ಸಮುದ್ರ). ಈ ನಾರಾಯಣನೇ ವಿಶ್ವಕ್ಕೆಲ್ಲ ಸುಖವನ್ನು ಉಂಟುಮಾಡುವವನು. ನಾರಾಯಣನು ವ್ಯಾಪಿಸಿಕೊಂಡು ಎಲ್ಲವೂ ಅವನೇ ಆಗಿದ್ದರೂ ಸರ್ವವೂ ನಾರಾಯಣನೇ ಎಂಬ ಭಾವನೆಯುಳ್ಳವರು ವಿರಳ. ಆದ್ದರಿಂದ ಮಂದಮಧ್ಯಮಾಧಿಕಾರಿಗಳಿಗಾಗಿ ಈ ನಾರಾಯಣನನ್ನು ಉಪಾಸ್ಯನೆಂದು ಭಾವಿಸಿ ಹೃದಯಾಕಾಶದಲ್ಲಿ ಧ್ಯಾನಿಸಬೇಕೆಂದು ಹೇಳಿದೆ. ಈ ಹೃದಯ ಪದ್ಮವು ಮನುಷ್ಯ ದೇಹದಲ್ಲಿ ತಲೆಕೆಳಗಾಗಿ ರಚಿತವಾಗಿರುವುದು. ಇಂಥ ಹೃದಯದಲ್ಲಿ ನಾರಾಯಣನನ್ನು ಉಪಾಸನೆ ಮಾಡಬೇಕು.

ಮಂತ್ರ

ಅಧೋನಿಷ್ಪಾ ಽ ವಿತಸ್ತ್ಯಾಂತೇ ನಾಭ್ಯಾಮುಪರಿತಿಷ್ಠತಿ ।
ಜ್ವಾಲಮಾಲಾ ಕುಲಂ ಭಾತಿ ವಿಶ್ವಸ್ಯಾಯತನಂ ಮಹತ್ ॥

ತಾತ್ಪರ್ಯ

ಈ ಮಂತ್ರದಲ್ಲಿ ಹೃದಯವು ಮನುಷ್ಯನ ಶರೀರದಲ್ಲಿ ಎಲ್ಲಿದೆ? ಎಂಬುದನ್ನು ತಿಳಿಸಲಾಗಿದೆ. ಹೃದಯವೆಂಬ ಭಾಗವು ನಿಷ್ಠಿಗೂ (ಕುತ್ತಿಗೆಯ ಕೆಳಭಾಗ) ಹೊಕ್ಕಳಿನ ಮೇಲಕ್ಕೂ, ವಿತಸ್ತಿಯ ತುದಿಯಲ್ಲಿ ಅಂದರೆ ಹನ್ನೆರಡು ಅಂಗುಲಗಳಷ್ಟು ನಾಭಿಯ ಮೇಲುಭಾಗದಲ್ಲಿ ಶರೀರದ ಮಧ್ಯಭಾಗದಲ್ಲಿ ಪದ್ಮಕೋಶವನ್ನು ಹೋಲುವ ಹೃದಯ ಕಮಲವಿದೆ. ಅದೇ ನಾರಾಯಣಾತ್ಮನ ಸಾನ್ನಿಧ್ಯ. ಈ ಹೃದಯವೇ ನಾರಾಯಣನಲ್ಲ, ಡಬ್ಬಿಯೇ ಒಡವೆಯಲ್ಲ, ಡಬ್ಬಿಗಿಂತ ಸ್ವಲ್ಪ ದಾರಾಳ ಸ್ಥಾನ ಬಿಟ್ಟು ಬಾಳುವ, ಹಾಗೂ

Sri Vidyabharathi Book Centre, Shimoga

CC-O. In Public Domain. Digitized by eGangotri

ಹೊಳೆಯುವ ವಜ್ರವು ಬೇರೆಯಾಗಿರುವಂತೆ ನಾರಾಯಣನೆಂಬ ಮಾಣಿಕ್ಯವು ಎಂದೆಂದಿಗೂ ಅಳಿಯದ; ಹಿಗ್ಗದ, ಕುಗ್ಗದ, ಅಮೂಲ್ಯ ವಜ್ರವಾಗಿರುವುದು. ಈ ಹೃದಯ ಕಮಲ ಕೋಶದಲ್ಲಿ ಅತ್ಯಂತ ಪ್ರಕಾಶಮಾನನಾಗಿ ವಿರಾಜಿಸುವ, ಬ್ರಹ್ಮಾಂಡಕ್ಕೆಲ್ಲಾ ಆಧಾರನಾದ ಪರಮಾತ್ಮನು ಇರುವನೆಂದು ಮನಸ್ಸನ್ನು ಈ ಹೃದಯಾಕಾಶದಲ್ಲಿ ನೆಲೆಗೊಳಿಸಿ ಉಪಾಸಿಸಬೇಕು. ಹಾಗೆ ಮಾಡಿದರೆ ಉಪಾಸಕನು ಅಮೃತತ್ವವನ್ನೇ ಪಡೆಯುವನು.

ಮಂತ್ರ

ಸಂತತಗ್ಂ ಶಿಲಾಭಿಸ್ತು ಲಂಬತ್ಯಾ ಕೋಶ ಸನ್ನಿಭಮ್
ತಸ್ಯಾಂತೇ ಸುಷಿರಗ್ಂ ಸೂಕ್ಷ್ಮಂ ತಸ್ಮಿನ್ ಥ್ಸರ್ವಂ ಪ್ರತಿಷ್ಠಿತಂ ॥

ತಾತ್ಪರ್ಯ

ಈ ಮಂತ್ರದಲ್ಲಿ ಹೃದಯ ಕಮಲದ ವಿಷಯವನ್ನು ಮೊದಲು ಪ್ರಸ್ತಾಪಿಸಿ, ಅನಂರ ಸುಷುಮ್ನಾ ನಾಡಿಯ ವಿಚಾರವನ್ನು ಹೇಳಿದೆ. ಪದ್ಮದ ಮೊಗ್ಗಿನಂತೆ ಶರೀರದ ಮಧ್ಯಭಾಗದಲ್ಲಿ ತಲೆಕೆಳಗಾಗಿ ಈ ಪದ್ಮಕೋಶವು ಜೋತು ಬಿದ್ದಿರುವುದು. ಅದು ಶಿಲಾ (ಶಿರಾ)ಗಳಿಂದ – ನಾಡಿಗಳಿಂದ ಸುತ್ತಲೂ ಆವರಿಸಲ್ಪಟ್ಟಿರುವುದು. ಈ ನಾಡಿಗಳಲ್ಲಿ ಒಂದುನೂರಒಂದು ನಾಡಿಗಳು ಪ್ರಧಾನವಾದುವು. ಸುಷುಮ್ನಾ ಎಂಬುದೊಂದು ಮಾತ್ರಾ ಊರ್ಧ್ವಮುಖವಾಗಿದ್ದು ಬ್ರಹ್ಮರಂಧ್ರವನ್ನು ಹೋಗಿ ಸೇರುವುದೆಂದು ಉಪನಿಷತ್ತುಗಳು ಹೇಳುತ್ತವೆ. ಈ ಸುಷುಮ್ನಾ ನಾಡಿಯ ತುದಿಯಲ್ಲಿ ಅತಿ ಸೂಕ್ಷ್ಮವಾದ ಒಂದು ರಂಧ್ರ (ಸುಷಿರ ಬಿಲ, ಸುಷುಮ್ನಾ ನಾಡಿಯ ರಂಧ್ರ) ವಿರುವುದು. ಆ ರಂಧ್ರವನ್ನು ಜ್ಞಾನ ದೃಷ್ಟಿಯಿಂದ ಒಳಹೊಕ್ಕು ನೋಡಿದರೆ ಅಲ್ಲಿ ಎಲ್ಲವೂ ಇರುವುದು (ಸರ್ವಂ ಪ್ರತಿಷ್ಠಿತಮ್). ಅಲ್ಲಿಯೇ ಪರಬ್ರಹ್ಮನು ಅಭಿವ್ಯಕ್ತನಾಗುತ್ತಾನೆ. ಈ ಹೃದಯಾಕಾಶದಲ್ಲಿ ಪರಬ್ರಹ್ಮವು ಕಂಡು ಬರುವುದರಿಂದ, ಹಾಗೂ ಆ ಪರಬ್ರಹ್ಮವೇ ಸರ್ವವೂ ಆಗಿರುವುದರಿಂದ ಹೃದಯದಲ್ಲಿರುವ ಆಕಾಶದಲ್ಲಿ ಸರ್ವವೂ ಇದ್ದಂತಾಯಿತು. ಇದೇ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಸ್ಥಾನವೆಂಬುದು ಈ ಮಂತ್ರದ ಆಶಯ.

CC-O. In Public Domain. Digitized by eGangotri

ಮಂತ್ರ

ತಸ್ಯ ಮಧ್ಯೇ ಮಹಾನಗ್ನಿರ್ವಿಶ್ವಾರ್ಚಿರ್ವಿಶ್ವತೋ ಮುಖಃ।
ಸೋಽಗ್ರಭುಗ್ವಿ ಭಜನ್ ಶಿಷ್ಟನ್ ಆಹಾರ ಮಜರಃ ಕವಿಃ।
ತಿರ್ಯ ಗೂರ್ಧ್ವ ಮಧಶ್ಶಾಯೀ ರಶ್ಮಯಸ್ತಸ್ಯ ಸಂತತಾ ॥

ತಾತ್ಪರ್ಯ

ಈ ಮಂತ್ರದಲ್ಲಿ ಉಪಾಸ್ಯನಾದ ಭಗವಂತನ ಸ್ವರೂಪವನ್ನು ಪರಿಚಯ ಮಾಡಿಕೊಡಲಾಗಿದೆ. ಈ ಹೃದಯ ಕಮಲವೆಂಬ (ಸುಷುಮ್ನಾ ನಾಳದ) ಆಕಾಶದಲ್ಲಿ ಅನೇಕ ಅಗ್ನಿ ಜ್ವಾಲೆಗಳಿಂದ ಸುತ್ತುವರಿಯಲ್ಪಟ್ಟ, ಎಲ್ಲಾ ಕಡೆಗಳಲ್ಲೂ ವ್ಯಾಪಿಸಿ ನಾನಾ ಮುಖವಾಗಿರುವ ಪ್ರೌಢವಾದ ಅಗ್ನಿಯಿದೆ. ಇದನ್ನು 'ಅಜರ'ವೆಂದೂ 'ಕವಿ'ಯೆಂದೂ ಕರೆಯುತ್ತಾರೆ. ವೈಶ್ವಾನರ ಎಂಬ ಹೆಸರಿನ ಈ ಜಠರಾಗ್ನಿ ನಾವು ತಿಂದ ಆಹಾರವನ್ನು ಮೊದಲು ಜೀರ್ಣಿಸುತ್ತದೆ. ನಂತರ ಅಗ್ರಭುಕ್ ಎಂದು ಕರೆಸಿಕೊಳ್ಳುತ್ತಾ ತಿಂದ ಆಹಾರದ ಸಾರವನ್ನು ಶರೀರದ ಎಲ್ಲಾ ಅವಯವಗಳಿಗೂ ಹಂಚಿ ಕೊಡುತ್ತದೆ. ಈ ಅಗ್ನಿಯು ನಾವು ತಿಂದ ಆಹಾರವನ್ನು ಜೀರ್ಣಿಸುವುದೇ ಹೊರತು, ತಾನು ಜೀರ್ಣವಾಗುವುದಿಲ್ಲ. ಆದುದರಿಂದಲೇ ಈ ಅಗ್ನಿಗೆ 'ಅಜರ' (ಕುಶಲ) ಎಂದೂ ಶ್ರುತಿಗಳು ತಿಳಿಸುತ್ತವೆ. ಇದರ ಚಾತುರ್ಯವನ್ನು ಶ್ರುತಿಗಳು ಪ್ರಶಂಸಿಸಿವೆ. ಈ ತೇಜಸ್ಸಿನ ರಶ್ಮಿಗಳು ಮೇಲೂ, ಕೆಳಗೂ, ಅಡ್ಡಡ್ಡಲಾಗಿಯೂ, ಎಲ್ಲೆಲ್ಲಿಯೂ ಹರಡಿವೆ. ಈ ಜಗದ್ರಚನಾ ಕೌಶಲ್ಯವೆಲ್ಲವೂ ಭಗವಂತನದೇ ಆದ್ದರಿಂದಲೂ, ಆ ಭಗವಂತನೇ ವೈಶ್ವಾನರಾಗ್ನಿಯಾಗಿರುವುದರಿಂದಲೂ, ಪ್ರತಿಯೊಬ್ಬನೂ ಆ ವೈಶ್ವಾನರಾಗ್ನಿಯನ್ನೇ ಕಂಡುಕೊಂಡು ಉಪಾಸನೆ ಮಾಡಿದಲ್ಲಿ ಮುಂದೆ ಅದೇ ಭಗವಂತನ ನಿಜ ತತ್ತ್ವದ ಅರಿವಿಗೆ ಸಹಾಯವಾಗುವುದು.

ಈ ಮಂತ್ರವು ಶರೀರದ ಮಧ್ಯ (ಹೃದಯ)ದಲ್ಲಿರುವ ಅಗ್ನಿಯನ್ನು ವರ್ಣಿಸುತ್ತದೆ. ಇಲ್ಲಿ ಬರುವ 'ವಿಶ್ವ'ವೆಂಬ ಪದವು ಶರೀರವನ್ನು ಸೂಚಿಸುತ್ತದೆ. ಈ ಅಗ್ನಿಯು ಅನೇಕ ಅದ್ಭುತಗಳನ್ನು ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ರಹಸ್ಯಗಳನ್ನೂ ಒಳಗೊಂಡು ಎಲ್ಲಾ ಭಾಗಗಳನ್ನೂ ಮುಟ್ಟಿ ಅವೆಲ್ಲಕ್ಕೂ ಚೈತನ್ಯವನ್ನು ಕೊಟ್ಟು ಧರಿಸುತ್ತದೆ. ಶರೀರದ ವೃದ್ಧಿಕ್ಷಯಗಳಿಗೆ ಈ ಅಗ್ನಿಯೇ ಕಾರಣ. ಶರೀರದಲ್ಲಿ ದೈಹಿಕ, ಮಾನಸಿಕ ಮತ್ತು ಇಂದ್ರಿಯವ್ಯಾಪಾರಗಳೆಲ್ಲಕ್ಕೂ ಅವಲಂಬಿಯಾಗಿರುವ ಅನ್ನದ ಸಾರ (ಅಗ್ರ) ಭಾಗವನ್ನು ಸೇವಿಸಿ, ಅದು ಸಪ್ತಧಾತುಗಳ ರೂಪವನ್ನು ಹೊಂದುವಂತೆ ಈ ಅಗ್ನಿಯೇ ಮಾಡುವುದು.

ಮಂತ್ರ

ಸಂತಾಪಯತಿ ಸ್ವಂ ದೇಹ ಮಾಪಾದತಲ ಮಸ್ತಕಃ ।
ತಸ್ಯ ಮಧ್ಯೇ ವಹ್ನಿ ಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ॥

ತಾತ್ಪರ್ಯ

ಈ ಮಂತ್ರವು ವೈಶ್ವಾನರಾಗ್ನಿಯ ಸ್ವರೂಪವನ್ನು ಮತ್ತುಷ್ಟು ವಿವರಿಸಿ ಅನಂತರ ಅದರ ಸೂಕ್ಷ್ಮರೂಪವನ್ನು ಪರಿಚಯಿಸುತ್ತದೆ. ಆ ಅಗ್ನಿಯು ಮನುಷ್ಯನ ದೇಹವನ್ನು ಕಾಲಿನಿಂದ ತಲೆಯವರೆಗೂ ವ್ಯಾಪಿಸಿ ಅದನ್ನು ತಾಪಗೊಳಿಸುತ್ತದೆ. ಶರೀರದಲ್ಲಿರುವ ಶಾಖಕ್ಕೆ ಈ ಅಗ್ನಿಯೇ ಮೂಲ. ಇದರ ಜ್ವಾಲೆಗಳಲ್ಲಿ ಒಂದಾನೊಂದು ಜ್ವಾಲೆಯು ಬಹು ಸೂಕ್ಷ್ಮವಾಗಿದ್ದು ಮೇಲು ಮುಖವಾಗಿ ಹೊರಟು ಬ್ರಹ್ಮರಂಧ್ರದ (ನೆತ್ತಿಯ) ವರೆಗೂ ವ್ಯಾಪಿಸಿರುವ ಅತ್ಯಂತ ಸೂಕ್ಷ್ಮವಾದ ಜ್ವಾಲೆಯಾದ (ಅಗ್ನಿಯ ಶಿಖೆ) ಸುಷುಮ್ನಾ ನಾಡಿ (ನಾಳ) (ಹೃದಯಕಮಲ) ಮಾರ್ಗವಾಗಿ ಮೇಲಕ್ಕೆರುವುದು. ಯೋಗಿಯಾದವನು ಇದರ ಮೂಲಕವೇ ತನ್ನ ಪ್ರಾಣವನ್ನು ಲೋಕಾಂತರಗಳಿಗೆ ಒಯ್ಯುವನು.

ಮಂತ್ರ

ನೀಲತೋಯದ ಮಧ್ಯಸ್ಥಾದ್ವಿದ್ಯುಲ್ಲೇಖೇವ ಭಾಸ್ವರಾ ।
ನೀವಾರ ಶೂಕ ವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ॥

CC-O. In Public Domain. Digitized by eGangotri

ತಾತ್ಪರ್ಯ

ಹಿಂದಿನ ಮಂತ್ರದಲ್ಲಿ ಹೇಳಿದ ಜ್ಯೋತಿಯ ಹೆಚ್ಚಿನ ವರ್ಣನೆಯನ್ನು ಈ ಮಂತ್ರದಲ್ಲಿ ಕೊಡಲಾಗಿದೆ. ಈ ಅಗ್ನಿ ಜ್ವಾಲೆಯು ಕಪ್ಪು ಮೋಡದ ನಡುವೆ ಕಾಣುವ ಕೋಲ್ಮಿಂಚಿನ ರೇಖೆಯಂತೆ ಅತಿಶಯವಾದ ಕಾಂತಿಯಿಂದ ಬೆಳಗುವುದು. ಈ ಬೆಳಕು ನವಣೆಯ ತುದಿಯಲ್ಲರುವ ಚೂಪಾದ, ಉದ್ದವಾದ ಹಾಗೂ ಬಾಲದಂತೆ, ಮುಳ್ಳಿನಂತೆ ಸೂಕ್ಷ್ಮವಾಗಿ ಅತ್ಯಂತ ಸಣ್ಣದಾಗಿರುವುದು. ಇದು ಹೊಂಬಣ್ಣ (ಹಳದಿ ಬಣ್ಣ)ದ ಕಾಂತಿಯಿಂದ ಥಳಥಳಗುಟ್ಟುತ್ತಿರುವುದು, ಇದಕ್ಕೆಣೆಯಾದುದು ಮತ್ತೆ ಯಾವುದೂ ಇರುವುದಿಲ್ಲ. ಇಂಥವಹ್ನಿ ಶಿಖೆಯನ್ನು ನಾವು ಧ್ಯಾನ ಬಲದಿಂದ ಕಂಡುಕೊಳ್ಳಬೇಕು. ಈ ಅಗ್ನಿ ಶಿಖೆಯ ತುದಿಯಲ್ಲಿರುವ ಪ್ರಕಾಶವು ಪರಮಾತ್ಮನ ದಿವ್ಯಸ್ಥಾನವಾಗಿರುವುದು.

ಮಂತ್ರ

[ತಸ್ಯಾಶ್ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ।
ಸಬ್ರಹ್ಮ ಸಶಿವಃ ಸಹರಿಃ ಸೇಂದ್ರಃ ಸೋಽಕ್ಷರಂಃ ಪರಮ ಸ್ಸ್ವರಾಟ್॥]

ತಾತ್ಪರ್ಯ

ಮೇಲೆ ವರ್ಣಿಸಿದ ಭಗವಂತನ ನಿಜರೂಪವನ್ನು ಮತ್ತೆ ಈ ಮಂತ್ರದಲ್ಲಿಯೂ ವಿವರಿಸಿದೆ. ಮೇಲೆ ತಿಳಿಸಿದ ತೇಜೋ ಜ್ವಾಲೆಯ ಮಧ್ಯದಲ್ಲಿ ಜಗತ್ಕಾರಣ ಭೂತನಾದ ಪರಮಾತ್ಮನು ಅಭಿವ್ಯಕ್ತನಾಗುವನು. ಆ ಸ್ಥಾನವು ಅತ್ಯಂತ ಸೂಕ್ಷ್ಮ ಸ್ಥಾನವಾದರೂ, ಅತ್ಯಲ್ಪವಾಗಿ ಕಂಡರೂ ಅಲ್ಲಿ ಗೋಚರಿಸುವ ಪರಮಾತ್ಮನು ಮಾತ್ರ ಬೃಹದಾಕಾರನಾಗಿ ಸರ್ವದೇವಾತ್ಮಕನೆನಿಸಿ, ಸರ್ವೋತ್ತಮನಾಗಿರುತ್ತಾನೆ. ಬ್ರಹ್ಮವೂ ಅವನೇ, ಈಶ್ವರನೂ ಅವನೇ, ವಿಷ್ಣುವೂ ಅವನೇ, ಇಂದ್ರನೂ ಅವನೇ, ಮಾಯಾ ವಿಶಿಷ್ಟನಾದ ಅಂತರ್ಯಾಮಿಯೂ ಅವನೇ. ಅವನು ಅತ್ಯುತ್ಕೃಷ್ಟನೂ, ಸ್ವತಂತ್ರನೂ, ಪ್ರಭುವೂ ಆಗಿದ್ದಾನೆ. ಈ ಪರಮಾತ್ಮನೇ ಈ ಮಂತ್ರದಲ್ಲಿ ಹೇಳಿರುವ

CC-O. In Public Domain. Digitized by eGangotri

CC-O. In Public Domain. Digitized by eGangotri

ರೀತಿಯಲ್ಲಿ ಹೃದಯ ಕಮಲ ಕೋಶದ ಮಧ್ಯದ ರಂಧ್ರದಲ್ಲಿ ಉಪಾಸಿಸಬೇಕು. (ಸಕಲ ದೇವ ವಿಭೂತಿಗಳನ್ನೂ ಧರಿಸಿ ವಿಶ್ವದ ಆಗು ಹೋಗುಗಳೆಲ್ಲವನ್ನೂ ನಡೆಸುವ ನಾರಾಯಣನೇ ಸರ್ವಾಧಿಪತಿ ಎಂದು ಈ ಮಂತ್ರವು ಅವನನ್ನು ಹೊಗಳುತ್ತದೆ).

ಮಂತ್ರ

ಓಂ ತದ್ ಬ್ರಹ್ಮ। ಓಂ ತದ್ವಾಯುಃ। ಓಂ ತದಾತ್ಮಾ। ಓಂ ತತ್ ಸತ್ಯಮ್ । ಓಂ ತತ್ ಸರ್ವಮ್ । ಓಂ ತತ್ ಪುರೋರ್ನಮಃ ॥

ಆಂತಶ್ಚರತಿ ಭೂತೇಷು ಗುಹಾಯಾಂ ವಿಶ್ವಮೂರ್ತಿಷು । ತ್ವಂ ಯಜ್ಞಸ್ತ್ವಂ ವಷಟ್‌ಕಾರ ಸ್ತ್ವಮಿಂದ್ರ ಸ್ತ್ವಗ್ಂ ರುದ್ರಸ್ತ್ವಂ ವಿಷ್ಣುಸ್ತ್ವಂ। ಬ್ರಹ್ಮತ್ವಂ ಪ್ರಜಾಪತಿಃ ॥ ತ್ವಂ ತದಾಪ ಆಪೋ ಜ್ಯೋತಿ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

ತಾತ್ಪರ್ಯ

ಈ ಮಂತ್ರವು ಸಕಲ ಪಾಪ ಪರಿಹಾರಕವಾದುದು. ವೇದಾಂತ ಪ್ರತಿಪಾದ್ಯನಾದ ಆ ಬ್ರಹ್ಮವಸ್ತುವು ಅತ್ಯಂತ ದೊಡ್ಡದು. ಅದೇ ವಾಯು–ರೂಪದಿಂದ ಎಲ್ಲೆಲ್ಲಿಯೂ ಚಲಿಸತಕ್ಕದ್ದು. ಜೀವಾತ್ಮರೂಪದಿಂದ ಸಕಲ ಪ್ರಾಣಿಗಳಲ್ಲಿಯೂ ತುಂಬಿರುವುದು ಅದೇ ವಸ್ತುವು. ಅದೊಂದೇ ಸತ್ಯವಾದುದು. ಅದೇ ಎಲ್ಲವೂ. ಸ್ಥೂಲ, ಸೂಕ್ಷ್ಮ ಶರೀರಗಳೂ ಸಹ ಆ ಪರಮಾತ್ಮನೇ. ವಿಶಾಲವಾದ ಬ್ರಹ್ಮಾಂಡಕ್ಕೆ ಕಾರಣನಾದ ಪರಮಾತ್ಮನಿಗೆ ಪ್ರಣಾಮಗಳು.

ಇಂತಹ ಬ್ರಹ್ಮವಸ್ತುವೇ ಸಕಲ ಪ್ರಾಣಿಗಳ ದೇಹಗಳಲ್ಲೂ ಹೃದಯ ಪುಂಡಲೀಕದ ನಡುವೆ ನೆಲಸಿದೆ. ಈ ರೀತಿಯಾಗಿ ಪರಮಾತ್ಮನ ಸರ್ವಾತ್ಮಕತ್ವವನ್ನು ಪರೋಕ್ಷವಾಗಿ ಆತನು ಸರ್ವವ್ಯಾಪಕನೆಂಬ ಅಂಶವನ್ನು ಪ್ರತಿಪಾದಿಸುತ್ತದೆ. ಷಡ್ಗುಣೈಶ್ವರ್ಯ ಸಂಪನ್ನನಾದ ಪರಮಾತ್ಮನೇ! ನೀನೇ ಸಕಲ ಯಜ್ಞರೂಪನು. ದೇವತೆಗಳಿಗೆ ಹವಿರ್ಭಾಗವನ್ನು ಸಮರ್ಪಿಸುವಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಚ್ಚರಿಸುವ ವಷಟ್ಕಾರ, ಸ್ವಾಹಾಕಾರ ಸ್ವರೂಪನು. ಪಿತೃಪ್ರೀತಿ–ದಾಯಕವಾದ ಸ್ವಧಾಕಾರವೂ, ಮನುಷ್ಯರಿಗೆ ಸಂತೋಷದಾಯಕವಾದ ಹಂತಕಾರವೂ ನೀನೇ ಆಗಿರುವೆ. ನೀನೇ ಇಂದ್ರ, ರುದ್ರ, ವಿಷ್ಣು ಬ್ರಹ್ಮ ಮತ್ತು ಪ್ರಜಾಪತಿ ರೂಪದಿಂದ ಇರತಕ್ಕವನು. ನೀನೇ ವಿರಾಟ್ಪುರುಷ. ಸಕಲ ಬ್ರಹ್ಮಾಂಡವೂ ನೀನೇ. ನದ್ಯಾದಿಗಳಲ್ಲಿನ ಜಲಸಮುದಾಯವೂ, ಸಮುದ್ರದಲ್ಲಿನ ಉದಕಸಮುದಾಯವೂ ನೀನೇ. ಸೂರ್ಯ ಚಂದ್ರಾಗ್ನಿ ರೂಪವಾದ ತೇಜಸ್ಸೂ ನೀನೇ. ಉಪ್ಪು, ಹುಳಿ, ಕಾರ, ಸಿಹಿ, ಕಹಿ, ಒಗರುಗಳೆಂಬ ಆರು ಬಗೆಯ ರಸ ಸ್ವರೂಪನೂ ನೀನೇ. ದೇವತೆಗಳ ಆಹಾರವೆನಿಸಿದ ಅಮೃತವೂ ನೀನೇ. ಋಗ್ವಾದಿವೇದಗಳ ಸಮುದಾಯವೂ ನೀನೇ. ಭೂಃ, ಭುವಃ, ಸುವಃ ಎಂಬ ಮೂರು ಲೋಕಗಳೂ ನೀನೇ. ನೀನೇ ಓಂಕಾರ ವಾಚ್ಯವಾದ ಶಬ್ದ ಬ್ರಹ್ಮನಾಗಿರುತ್ತೀಯೆ.

ಮಂತ್ರ

ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ। ಪರೇಣ ನಾಕಂ ನಿಹಿತಂ ಗುಹಾಯಾಂ ವಿಭ್ರಾಜ ದೇತದ್ಯತಯೋ ವಿಶಂತಿ । ವೇದಾಂತ ವಿಜ್ಞಾನ ಸುನಿಶ್ಚಿತಾರ್ಥ ಸ್ಸಂನ್ಯಾಸಯೋಗಾದ್ಯತಯಶ್ಶುದ್ಧಸತ್ತ್ವಾಃ। ತೇ ಬ್ರಹ್ಮಲೋಕೇ ತು ಪರಾಂತ ಕಾಲೇ ಪರಾಮೃತಾತ್ಪರಿಮುಚ್ಯಂತಿ ಸರ್ವೇ ॥ ದ್ರಹಂ ವಿಪಾಪಂ ಪರಮೇಽಶ್ಮಭೂತಂ ಯತ್ಪುಂಡರೀಕಂ ಪುರಮಧ್ಯ ಸಗ್ಂಸ್ಥಮ್ । ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತ ಸ್ತದುಪಾಸಿತವ್ಯಮ್॥ ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ । ತಸ್ಯ ಪ್ರಕೃತಿಲೀನಸ್ಯ ಯಃ ಪರಸ್ಸಮಹೇಶ್ವರಃ ॥

ತಾತ್ಪರ್ಯ

ಬ್ರಹ್ಮತತ್ತ್ವವನ್ನು ಅನುಸಂಧಾನ ಮಾಡಲು ಸರ್ವಸ್ವ ತ್ಯಾಗವು ಅಂತರಂಗ ಸಾಧನವಾಗಿದೆ. ಆದರೆ ಪ್ರಾಯೋಗಿಕ

CC-O. Vidyabharathi Foundation Trust, Shringeri

CC-O. In Public Domain. Digitized by eGangotri

ಅಗ್ನಿಹೋತ್ರದಿಂದಾರಂಭಿಸಿ, ಸಹಸ್ರ ವರ್ಷಗಳಿಂದ ಸಾಧ್ಯವಾದ ಸತ್ರರೂಪವಾದ ಕರ್ಮದಿಂದಲೂ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಪಿತೃ ಋಣದಿಂದ ಪಾರಾಗಲು ಕಾರಣವಾದ ಪುತ್ರಸಂತತಿಯಿಂದಲೂ, ಅದನ್ನು ಪಡೆಯಲು ಆಗುವುದಿಲ್ಲ. ಹಣದಿಂದಲೂ ಸಾಧ್ಯವಿಲ್ಲ. ಹಾಗಾದರೆ ಮೋಕ್ಷವನ್ನು ಪಡೆಯುವ ಮಾರ್ಗವೆಂದರೆ ಎಲ್ಲಾ ವಿಧವಾದ ಲೌಕಿಕ ವೈದಿಕ ವ್ಯವಹಾರಗಳ ತ್ಯಾಗ ಮಾತ್ರದಿಂದ. ಅಂತರ್ಮುಖಿಗಳಾದ ಕೆಲವರು ಮೋಕ್ಷವನ್ನು ಪಡೆಯುತ್ತಾರೆ. ಇಂದ್ರಿಯಗಳನ್ನು ಜಯಿಸಿರುವ ಯತಿಗಳು ಪಡೆಯುವ ಮೋಕ್ಷವು ಸ್ವರ್ಗಾದಿ ಸುಖಗಳಿಗಿಂತಲೂ ಹೆಚ್ಚಿನದು. ಅದು ಏಕಾಗ್ರತೆಯಿಂದ ಕೂಡಿದ ತನ್ನ ಬುದ್ಧಿ ಗುಹೆಯಲ್ಲಿಯೇ ಸದಾ ಪ್ರಕಾಶಿಸುವುದು. ಅದು ಅಂತರ್ಮುಖಿಗಳಿಗೆ ಅನುಭವ ವೇದ್ಯವಾದುದು.

ಜ್ಞಾನವೊಂದೇ ಮೋಕ್ಷಕ್ಕೆ ಪರಮಸಾಧನವೆಂದು ಶ್ರುತಿ–ಸ್ಮೃತಿಗಳು ಸಾರಿವೆ. ಯೋಗಿಗಳಾದವರು ಸರ್ವಸ್ವತ್ಯಾಗರೂಪವಾದ ಸನ್ಯಾಸ ಪೂರ್ವಕವಾಗಿ ಚಿತ್ತವೃತ್ತಿಗಳನ್ನು ಜಯಿಸಬೇಕು. ಹಾಗೆ ಜಯಿಸಿದವರ ಅಂತಃಕರಣವು ಪ್ರಸನ್ನವಾಗುತ್ತದೆ. ಆಗಲೇ ಅವರು ಯತಿಗಳೆಂದು ಕರೆಯಲ್ಪಡುವರು.

ವೇದಾಂತವೆಂದರೆ ಉಪನಿಷದ್ವಾಕ್ಯಗಳು. ಅದನ್ನು ಯುಕ್ತಿಪೂರ್ವಕವಾಗಿ ಪರಿಶೀಲಿಸುವುದರಿಂದ ಉಂಟಾಗುವ ಜ್ಞಾನವೇ ವೇದಾಂತ ವಿಜ್ಞಾನ. ಇಂತಹ ಜ್ಞಾನದಿಂದ ಜೀವ ಬ್ರಹ್ಮೈಕ್ಯದ ಅರಿವು ಅನುಭವಕ್ಕೆ ಬರುವುದು. ಅಂತಹ ಅನುಭವವನ್ನು ಪಡೆದವರೇ ವೇದಾಂತ ವಿಜ್ಞಾನ ಸುನಿಶ್ಚಿತರು.

ಬ್ರಹ್ಮ ಸಾಕ್ಷಾತ್ಕಾರವಾದವರಿಗೆ ಉತ್ತಮ, ಅಧಮ ಎಂಬ ಭೇದವಿರುವುದಿಲ್ಲ. ಎಲ್ಲರೂ ಪರಾಂತ ಕಾಲದಲ್ಲಿ ಸಂಸಾರ ಬಂಧನದಿಂದ ಬಿಡುಗಡೆ ಹೊಂದುವರು. ಅಜ್ಞಾನವಿದ್ದು ದೇಹವನ್ನು ಬಿಡುವ ಕಾಲಕ್ಕೆ 'ಅಪರಾಂತ ಕಾಲ'ವೆಂದೂ, ಅಜ್ಞಾನವು ಹೋಗಿ ದೇಹವು ಬಿದ್ದುಹೋಗುವ ಸಮಯಕ್ಕೆ 'ಪರಾಂತಕಾಲ'ವೆಂದೂ ಕರೆಯುವರು. ಜಗತ್ಕಾರಣವಾದ ಅವ್ಯಾಕೃತವು ತತ್ತ್ವಜ್ಞಾನವೊಂದರಿಂದಲೇ ನಾಶಹೊಂದುವುದು. ಪರಾಮೃತ

CC-O. In Public Domain. Digitized by eGangotri

ರೂಪವಾದ ಅವ್ಯಾಕೃತದಿಂದ ಅಜ್ಞಾನಿಗಳು ಪ್ರಳಯಕಾಲದಲ್ಲಿ ಮುಕ್ತರಾಗುವುದಿಲ್ಲ. ಜ್ಞಾನಿಗಳಿಗೆ ಅಜ್ಞಾನವಿಲ್ಲದ ಪ್ರಯುಕ್ತ ದೇಹಪಾತ ಸಮಯನಂತರವೇ ಮುಕ್ತಿಯು ಲಭಿಸುವುದು.

ಈ ದೇಹವೆಂಬುದು ಪುರ. ಈ ಶರೀರದ ಮಧ್ಯದಲ್ಲಿ ಹೃದಯಕಮಲವಿದೆ. ಆ ಹೃದಯ ಪದ್ಮದ ಮಧ್ಯದಲ್ಲಿರುವ ಕಿರಿದಾದ ಆಕಾಶವೇ ದಹರಾಕಾಶ. ಅದೇ ಪಾಪವಿದೂರವಾದ ಪರಮಾತ್ಮೋಪ–ಲಬ್ಧಿಸ್ಥಾನ. ಆದುದರಿಂದ ಅದು ಅತ್ಯಂತ ಶ್ರೇಷ್ಠವಾದ ಪುರ. ಆ ದಹರಾಕಾಶವನ್ನೇ ಪರಮಾತ್ಮನೆಂದು ಉಪಾಸಿಸಬೇಕು. ಪರಮಾತ್ಮನು ಸರ್ವವ್ಯಾಪಿಯಾದರೂ ಎಲ್ಲೆಲ್ಲಿಯೂ ಇರುವ ಆಕಾಶವನ್ನು ಘಟಾಕಾಶ, ಮಠಾಕಾಶವೆಂದು ವ್ಯವಹರಿಸುವಂತೆ, ದಹರಾಕಾಶವನ್ನು ಪರಬ್ರಹ್ಮ ಎಂದೇ ಉಪಾಸನೆ ಮಾಡಬೇಕು.

ವೇದಾಧ್ಯಯನದ ಪ್ರಾರಂಭದಲ್ಲಿ ಯಾವ ಓಂಕಾರವನ್ನು ಪಠಿಸುತ್ತೇವೆಯೋ, ಉಪನಿಷತ್ತುಗಳಲ್ಲಿ ಯಾವ ಓಂಕಾರವು ಸುಪ್ರತಿಪಾದಿತವಾಗಿರುವುದೋ, ಅಂತಹ ಓಂಕಾರವು ಧ್ಯಾನ ಸಮಯದಲಿ ಜಗತ್ಕಾರಣವಾದ ಅವ್ಯಾಕೃತದಲ್ಲಿ ಲಯ ಹೊಂದುವುದು. ಅಂದರೆ 'ಓಂ' ಕಾರದಲ್ಲಿ ಅಕಾರ, ಉಕಾರ, ಮಕಾರ, ನಾದ ಎಂದು ನಾಲ್ಕು ಮಾತ್ರೆಗಳಿವೆ. ಅಕಾರದಲ್ಲಿ ವಿರಾಟ ಸ್ವರೂಪವನ್ನೂ, ಉಕಾರದಲ್ಲಿ ಹಿರಣ್ಯಗರ್ಭ ಸ್ವರೂಪವನ್ನೂ, ಮಕಾರದಲ್ಲಿ ಅವ್ಯಾಕೃತ ಸ್ವರೂಪವನ್ನೂ ಧ್ಯಾನಿಸಿ ವಿರಾಡ್ರೂಪವಾದ ಆ ಉಕಾರವನ್ನು ಮಕಾರ ರೂಪವಾದ ಅವ್ಯಾಕೃತದಲ್ಲಿ ಲಯ ಹೊಂದಿಸಿ, ಆ ಪ್ರಣವದ ನಾಲ್ಕನೆಯ ಮಾತ್ರೆಯಾದ ನಾದದಲ್ಲಿ ಉತ್ಕೃಷ್ಟನೆನಿಸಿದ ಪರಮೇಶ್ವರನನ್ನು ಧ್ಯಾನಿಸಬೇಕು. ಈ ಸ್ವರೂಪವೇ ಗಗನ ಶಬ್ದ ವಾಚ್ಯನಾದ ಪರಮಾತ್ಮನು.

ಮಂತ್ರ

ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ । ನಮೋ ವಯಂ ವೈಶ್ರವಣಾಯ ಕುರ್ಮಹೇ । ಸ ಮೇ ಕಾಮಾನ್ಕಾಮ ಕಾಮಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹ್ಯಮ್ । ಕಾಮೇಶ್ವರೋ ವೈಶ್ರವಣೋದದಾತು । ಕುಬೇರಾಯ ವೈಶ್ರವಣಾಯ ಮಹಾರಾಜಾಯ ನಮಃ ॥

ತಾತ್ಪರ್ಯ

ರಾಜರಿಗೆಲ್ಲಾ ರಾಜನು ರಾಜಾಧಿರಾಜ, ಬಲಾತ್ಕಾರವಾಗಿ ಎಲ್ಲರ ಲಾಭದಾಯಕ ಕಾರ್ಯಗಳಿಗೂ ವಿಘ್ನವನ್ನುಂಟುಮಾಡುವ ರಾಜಾಧಿರಾಜನಾದ ವೈಶ್ರವಣನಿಗೆ ನಾವು ನಮಸ್ಕರಿಸುತ್ತೇವೆ. ಎಲ್ಲಾ ವಿಧವಾದ ಆಸೆ–ಆಕಾಂಕ್ಷೆಗಳಿಗೂ ಸ್ವಾಮಿಯಾದ ವೈಶ್ರವಣನು ಬಲ ಮತ್ತು ಭೋಗಗಳನ್ನು ಬಯಸುವ ನಮಗೆ ಅಪೇಕ್ಷಿಸಿದ ಭೋಗಗಳನ್ನೆಲ್ಲಾ ಕರುಣಿಸಲಿ. ಮಹಾರಾಜನೂ, ಕುಬೇರರೂಪನೂ ಆದ ವೈಶ್ರವಣನಿಗೆ ನಮಸ್ಕಾರಗಳು.

ಮಂತ್ರ

ತದ್ವಿಷ್ಣೋಃ ಪರಮಂ ಪದಗ್ಂ ಸದಾ ಪಶ್ಯಂತಿ ಸೂರಯಃ । ದಿವೀವ ಚಕ್ಷುರಾತಕಮ್ ॥ ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಸ್ಸಮಿಂಧತೇ । ವಿಷ್ಣೋರ್ಯತ್ಪರಮಂ ಪದಮ್ ॥

ತಾತ್ಪರ್ಯ

ಈ ಮಂತ್ರದಲ್ಲಿ ಭಗವಂತನ ಸ್ಥಾನವನ್ನು ವರ್ಣಿಸಿದೆ. ಆ ಸ್ಥಾನವು ಯಾವಾಗಲೂ ವಿರಾಜಮಾನವಾಗಿರುವುದು. ಸೂರ್ಯನನ್ನು ನಾವು ಬರಿಗಣ್ಣಿನಿಂದ ನೋಡಿದಾಗ ಉಂಟಾಗುವ ಅನುಭವದಂತೆ (ಬೆಳಕು ಅತಿಯಾಗಿರುವ ಕಾರಣ ಕಣ್ಣು ಕತ್ತಲೆಯಾಗುವುದು) ಸಾವಿರ ಸೂರ್ಯರ ಪ್ರಕಾಶಕ್ಕಿಂತಲೂ ತೇಜೋಮಯವಾಗಿರುವ ವಿಷ್ಣುವಿನ ಪರಮಪದವನ್ನು ಅಜ್ಞಾನಿಗಳು ನೋಡಲಾರರು. ಜ್ಞಾನಿಗಳಾದರೋ, ತಮ್ಮ ಶಮದಮಾದಿ ಸಾಧನಗಳಿಂದಲೂ, ಯೋಗತಪ ಆದಿ ಅನುಷ್ಠಾನಗಳಿಂದಲೂ ಅವರ ದೃಷ್ಟಿಯು ಸಂಸ್ಕೃತವಾಗಿರುವುದರಿಂದ ಅವರ ಅತೀಂದ್ರಿಯವಾದ, ಸೂಕ್ಷ್ಮವಾದ, ಪ್ರತ್ಯಜ್ಞಖವಾದ ದೃಷ್ಟಿಗೆ ಆ ಪರಮ ಪದವು ನಿರಾಯಾಸವಾಗಿ ಗೋಚರವಾಗುತ್ತದೆ. ಅವರು ಆ ಆನಂದದಲ್ಲೇ

CC-O. In Public Domain. Digitized by eGangotri

ಮುಳುಗಿರುತ್ತಾರೆ. ಎಲ್ಲೆ ಧರ್ಮಾಚರಣ ಶೀಲರಾದ ಮಹನೀಯರೇ! ನೀವೂ ಅದರಂತೆ ಅನುಗಾಲವೂ ಧರ್ಮಾಚರಣ ಶೀಲರಾಗಿದ್ದು ವೇದ ಶಾಸ್ತ್ರಗಳಲ್ಲಿ ಬೋಧಿತಗಳಾದ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಭಗವಂತನ ಅಪಾರ ಮಹಿಮೆಯನ್ನರಿತು ಕೃತ ಕೃತ್ಯತೆಯನ್ನು ಪಡೆಯಿರಿ.

ಭಗವಂತನ ದಿವ್ಯ ಮಹಿಮೆಯನ್ನರಿಯಲು ಆತನ ಅನುಗ್ರಹವೇ ಮುಖ್ಯ. ಅಂತಹ ಅನುಗ್ರಹವನ್ನು ಸಂಪಾದಿಸಲು ಭಗವಂತನನ್ನು ಶ್ರದ್ಧಾಭಕ್ತಿ ಪುರಸ್ಸರವಾಗಿ ಕೊಂಡಾಡುವುದು ಅತ್ಯಾವಶ್ಯಕ. ಭಗವಂತನಲ್ಲಿ ಶ್ರದ್ಧಾ–ಭಕ್ತಿಗಳನ್ನು ಗಳಿಸಲು ಜ್ಞಾನಿಗಳಲ್ಲಿ ವಿಚಾರ ಮಾಡಬೇಕು. ಅವರು ಪರಮಾತ್ಮನನ್ನು ಏಕಾಗ್ರತೆಯಿಂದ ಸ್ತುತಿಸುತ್ತಾರೆ. ಹಾಗೆ ವರ್ಣಿಸುವಾಗ ಆ ಪದವನ್ನು ಮತ್ತಷ್ಟು ಪ್ರಕಾಶಗೊಳಿಸುತ್ತಾರೆ, ವಿಶೇಷವಾಗಿ ಹೊಗಳುತ್ತಾರೆ. ಅದೇ ಪ್ರಕಾಶವು. ಅಂಥ ಜ್ಞಾನಿಗಳೂ, ಮೇಧಾವಿಗಳೂ, ಜಾಗರೂಕರೂ, ವಿದ್ವಾಂಸರೂ ಸದಾಕಾಲವೂ ವರ್ಣಿಸಿದ ಮೇಲೂ ಇನ್ನೂ ಪ್ರಕಾಶ ಮಾನವಾಗಿ ಬೆಳಗುತ್ತಾ ಸ್ತುತಿ ಪ್ರಪಂಚವನ್ನೂ ಮೀರಿ ನೆಲೆಗೊಡಿರುತ್ತದೆ. ವಿಷ್ಣುಪದವಿಯ ಮಹಿಮೆ ಅಂಥದು. ಆದುದರಿಂದ ಅನುಗಾಲವೂ ಆ ಭಗವಂತನನ್ನು ಬಗೆ ಬಗೆಯಾಗಿ ಭಜಿಸುವ ಭಕ್ತರು ಆತನ ದಿವ್ಯ ವೈಭವವನ್ನು ಲೋಕದಲ್ಲಿ ಬೆಳಗಿಸಬಲ್ಲರು. ಪ್ರಪಂಚವೆಲ್ಲವೂ ಶಾಂತಿಯಿಂದಿರಲಿ.

ಈ ಮಂತ್ರವು ಶಿವ–ವಿಷ್ಣು–ಮುಂತಾದ ಭೇದ ಭಾವನೆಯ ಅರ್ಥವನ್ನೇನೂ ತಿಳಿಸುವುದಿಲ್ಲ, ತೇಜಸ್ಸಿಗೆ ಯಾವುದೇ ನಾಮರೂಪ ಪರಿಚ್ಛೇದವಾಗಲೀ, ಭೇದವಾಗಲೀ ಇರುವುದಿಲ್ಲ, ಹಾಗೆಯೇ ಆ ತೇಜಸ್ಸಿಗೆ ಮುಖ–ಕೈಕಾಲುಗಳು–ಮುಂತಾದ ಅವಯವಗಳಾಗಲೀ, ಶರೀರವಾಗಲೀ ಇರುವುದಿಲ್ಲ, ತೇಜೋಮಯವಾದ ವಿಷ್ಣುಧಾಮವು ಶಿವವು–ಎಂದರೆ ಮಂಗಳ ಸ್ವರೂಪವೂ ಆಗಿರುವುದು. ಇಂಥ ತೇಜಃಸ್ವರೂಪವನ್ನು ಅನುಸಂಧಾನ ಮಾಡುತ್ತಾ ಪರಮ ಪದವಾದ ಮೋಕ್ಷ ಸಾಮ್ರಾಜ್ಯವನ್ನು ಪಡೆಯೋಣ.

॥ ಹರಿಃ ಓಂ ತತ್ಸತ್ ॥

॥ ಶ್ರೀ ಕೃಷ್ಣಾರ್ಪಣ ಮಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

ಮಂತ್ರಪುಷ್ಪಮ್

CC-O. In Public Domain. Digitized by eGangotri

ಸಂಗ್ರಹಕಾರರ ಪರಿಚಯ

ದಿವಂಗತ ಶ್ರೀ ಸಿ. ಲಕ್ಷ್ಮೀನಾರಾಯಣನ್‌ರವರು ಈವರೆಗೆ ಸುಮಾರು ಮೂವತ್ತು ವೈದಿಕ ಕೃತಿಗಳನ್ನು ಸಂಗ್ರಹಿಸಿ ಬರೆದಿದ್ದಾರೆ. ಅವುಗಳ ಪೈಕಿ ಅನೇಕ ಕೃತಿಗಳು ಮುದ್ರಣವಾಗಿ, ಪೂರ್ಣ ಮಾರಾಟವಾಗಿ ಮರು ಮುದ್ರಣಗೊಂಡಿವೆ. ಕೆಲವು ಕೃತಿಗಳು ಮುದ್ರಣದಲ್ಲಿವೆ. ಇದು ಅವರ ಕೃತಿಗಳ ಜನಪ್ರಿಯತೆಗೆ ನಿದರ್ಶನವೆಂದರೆ ತಪ್ಪಾಗಲಾರದು. ಇವರ ಕೃತಿಗಳಿಗೆ ಅಪಾರ ಬೇಡಿಕೆಯೂ ಇದೆ. ಇವರು ಬರೆದಿರುವ ಕೃತಿಗಳು ಎಲ್ಲಾ ಜನರೂ ಉಪಯೋಗಿಸಲು ಅನುಕೂಲವಾಗುವಂತೆ ಅನುಷ್ಠಾನ ಕ್ರಮ ಸಹಿತ, ಆಧಾರ ಸಹಿತವಾಗಿ ವಿವರಣೆಗಳನ್ನೊಳಗೊಂಡಿರುವುದು ಒಂದು ವಿಶೇಷ. ಸಾಮಾನ್ಯವಾಗಿ ಪಂಡಿತರುಗಳಿಗೆ ಮಾತ್ರ ಅರ್ಥವಾಗುವಂತೆ ಬರೆದಿದ್ದ ಅನೇಕ ವೈದಿಕ ಕೃತಿಗಳನ್ನು ಇವರು ಪುರೋಹಿತರಲ್ಲದಿದ್ದರೂ ಪೂಜಾದಿ ಕರ್ಮಗಳನ್ನು ನೆರವೇರಿಸಲು ನೆರವಾಗುವಂತೆ ರಚಿಸಿದ್ದಾರೆ. ಆಸ್ತಿಕ ಮಹಾಶಯರು ಈ ಹೊತ್ತಿಗೆಯನ್ನು ತುಂಬು ಹೃದಯದಿಂದ ಕೊಂಡು ಉತ್ತೇಜನ ಕೊಟ್ಟಾಗ ನಮ್ಮ ಹಾಗೂ ಸಂಗ್ರಹಕಾರರ ಶ್ರಮ ಸಾರ್ಥಕ.

- ಪ್ರಕಾಶಕರು

MANTRAPUSHPAM 2015 Sri Vidyabharathi Book Centre, Sringeri TNK Rs.25

Printed at : Sree Venkateshwara Printing Press, B-78. Ph : 22444763